19 September 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ


**ಭಾವನಾಂತರಂಗ**

ಮನಸ್ಸಿಗೆ ನೆಮ್ಮದಿಯೊಂದಿದ್ದರೆ ಸಾಕು, ಯಾವುದೇ ಕಷ್ಟಕರ ಕೆಲಸವನ್ನು ಸುಲಭವಾಗಿ ಕೈಗೊಳ್ಳಬಹುದು!

-ಸ್ನೇಹಾ ಆನಂದ್


info.varthaman@gmail.com




ಮೈಸೂರು ದಸರಾ ಉದ್ಘಾಟಕರ ಹುಡುಕಾಟ..! ಪುಟ ಸಂ. 2



ಬಿಜೆಪಿ ಮುಖಂಡರು, ಕಾರ್ಯಕರ್ತರಿಂದ ಪ್ರಧಾನಿ ಮೋದಿ ಜನ್ಮದಿನ ಆಚರಣೆ ಪುಟ ಸಂ. 3



ಕೇರಳಕ್ಕೆ ಖನಿಜ ಸಂಪತ್ತು ಸಾಗಾಟ: ಕಡಿವಾಣಕ್ಕೆ ಆಗ್ರಹ ಪುಟ ಸಂ. 4


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 275 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3


## ಕರಾವಳಿ ಅಭಿವೃದ್ಧಿಗೆ 32 ಸಾವಿರ ಕೋಟಿ

### ಮಂಗಳೂರಿನಲ್ಲಿ ನಡೆದ ವಿಶೇಷ ಸಂಪುಟ ಸಭೆಯಲ್ಲಿ ನಿರ್ಧಾರ: ಸಿಎಂ ಡಿಕೆಶಿ ಘೋಷಣೆ

**ಮಂಗಳೂರು:** ಕರಾವಳಿ ಭಾಗದ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ 32,612 ಕೋಟಿ ರೂ. ಅನುದಾನ ನೀಡಲು ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಮಂಗಳೂರಿನಲ್ಲಿ ಶುಕ್ರವಾರ ನಡೆದ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರಲ್ಲಿ ಗ್ರಾಮೀಣಾಭಿವೃದ್ಧಿಗೆ 16 ಸಾವಿರ ಕೋಟಿ ರೂ. ಮತ್ತು ಮೂಲಸೌಲಭ್ಯ ಅಭಿವೃದ್ಧಿಗೆ 16 ಸಾವಿರ ಕೋಟಿ ರೂ. ಒಳಗೊಂಡಿದೆ ಎಂದು ವಿವರಿಸಿದರು.

ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು ಎಂಬುದು ಸರಕಾರದ ಉದ್ದೇಶ. ಪುತ್ತೂರು ತಾಲೂಕಿನ ಬನ್ನೂರು ಗ್ರಾಮದಲ್ಲಿ ಗುರುತಿಸಿರುವ ಜಾಗದಲ್ಲಿ ಸರಕಾರಿ ವೈದ್ಯಕೀಯ ಕಾಲೇಜು, ಬೋಧನಾ ಆಸ್ಪತ್ರೆ, ಹಾಸ್ಟೆಲ್ ಮತ್ತಿತರ ಮೂಲಭೂತ ಸೌಲಭ್ಯ ಒಳಗೊಂಡಂತೆ 549.79 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ನಾಮಕರಣ ಮಾಡಬೇಕೆಂಬ ಕೂಗು ಕೇಳಿ ಬರುತ್ತಿದೆ. ಸಾರ್ವಜನಿಕರಿಂದ ಅಭಿಪ್ರಾಯ ಪಡೆದು ಈ ಬಗ್ಗೆ ತೀರ್ಮಾನಿಸಲಾಗುವುದು. ಈ ಸಂಬಂಧ ಸಾರ್ವಜನಿಕರು ಒಂದು ಪುಟ 2ಕ್ಕೆ



### ತುಳು ಅಧಿಕೃತ ಭಾಷೆ

**ಮಂಗಳೂರು:** ತುಳು ಭಾಷಿಕರ ದಶಕಗಳ ಹೋರಾಟ ಹಾಗೂ ನಿರೀಕ್ಷೆಗೆ ಕೊನೆಗೂ ಜಯ ಸಿಕ್ಕಿದೆ. ತುಳು ಭಾಷೆಗೆ ಕರ್ನಾಟಕದ ಎರಡನೇ ಅಧಿಕೃತ ಭಾಷೆಯ ಮಾನ್ಯತೆ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ.

ಮಂಗಳೂರಿನಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹತ್ವದ ತೀರ್ಮಾನ ಪ್ರಕಟಿಸಿದರು.

ಆಡಳಿತದಲ್ಲಿ ಕನ್ನಡ ಭಾಷೆಯ ಜೊತೆಗೆ ತುಳು ಭಾಷೆಯನ್ನು ಸರ್ಕಾರಿ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದ ಹೆಚ್ಚುವರಿ ಆಡಳಿತ ಭಾಷೆ ಎಂದು ಘೋಷಣೆ ಮಾಡಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು.

ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳು, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯಿಕ ಸಮೃದ್ಧತೆಯನ್ನು ಹೊಂದಿರುವ ಅಪೂರ್ವ ಪುಟ 2ಕ್ಕೆ

### ಮುಖ್ಯಾಂಶ

- ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಜಿಲ್ಲೆಯಾಗಿ ಮಾರ್ಪಾಡಿಗೆ ಸಿದ್ಧ
- ಪುತ್ತೂರಿನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಅಸ್ತು
- ಕರಾವಳಿ ಜಿಲ್ಲೆಗಳ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ನೀತಿ

### ಜನರ ಭಾವನೆಗಳ ಮೇಲೆ ರಾಜಕೀಯ ಮಾಡಲ್ಲ: ಸಿಎಂ

**ಮಂಗಳೂರು:** ಯಾರೂ ಗಾಬರಿಯಾಗಬೇಕಿಲ್ಲ. ನಮಗೆ ಜನರ ಬದುಕು ಮುಖ್ಯ. ನಾವು ಜನರ ಬದುಕಿನ ಮೇಲೆ ರಾಜಕೀಯ ಮಾಡುವವರು. ಭಾವನೆಗಳ ಮೇಲೆ ರಾಜಕೀಯ ಮಾಡುವವರಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸರಕಾರಿ ಅತಿಥಿಗೃಹದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲರ ಚಿಂತನೆಯನ್ನೊಳಗೊಂಡು ನಮ್ಮ ಸರಕಾರ ಕೆಲಸ ಮಾಡಲಿದೆ ಎಂದು ಹೇಳಿದರು

ಮಹಾತ್ಮ ಗಾಂಧಿ ಉಳಿದಿದ್ದ ಮನೆಗೆ ಹೋಗಿದ್ದೆ. ಅಲ್ಲಿ ಉಪಾಹಾರ ಮಾಡಿದೆ. ಮಂಗಳೂರು ಬನ್ಸ್, ದೋಸೆ ಎಲ್ಲಾ ಸವಿದೆ. ಇಲ್ಲಿಗೆ ಬಂದಿರುವುದು ಬಹಳ ಸಂತೋಷ ತಂದಿದೆ ಎಂದು ಹೇಳಿದರು.

### 'ಮಮತಾ ಟಿಎಂಸಿ' ಹೆಸರು: ಫುಟ್‌ಬಾಲ್ ಆಟಗಾರನ ಚಿಹ್ನೆ



**ನವದೆಹಲಿ:** ಪಶ್ಚಿಮ ಬಂಗಾಳ ಉಪಚುನಾವಣೆ ಹಿನ್ನೆಲೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಬಣಗಳ ಹೆಸರು ಮತ್ತು ಚುನಾವಣಾ ಚಿಹ್ನೆಗೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆ ನಡೆದಿದೆ.

ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಬಣಕ್ಕೆ ಮಮತಾ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ ಹೆಸರು ಹಾಗೂ ಫುಟ್‌ಬಾಲ್ ಆಟಗಾರ ಚಿಹ್ನೆಯನ್ನು ಚುನಾವಣಾ ಆಯೋಗ ನೀಡಿದೆ.

ಅಲ್ಲದೆ, ಅರೂಪ್ ರಾಯ್ ನೇತೃತ್ವದ ಟಿಎಂಸಿ ಬಣಕ್ಕೆ ಡೆಮಾಕ್ರಟಿಕ್ ತೃಣಮೂಲ ಕಾಂಗ್ರೆಸ್ ಹೆಸರು ಮತ್ತು ಲಕೋಟೆ ಚಿಹ್ನೆಯನ್ನು ನೀಡಲಾಗಿದೆ ಎಂದು ಚುನಾವಣಾ ಆಯೋಗದ ಆದೇಶದಲ್ಲಿ ತಿಳಿಸಿದೆ.

**ಟಿಎಂಸಿ ಹೆಸರು, ಚಿಹ್ನೆ ಫ್ರೀಜ್:** ಪಕ್ಷದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ವಿವಾದದ ಹಿನ್ನೆಲೆ ಚುನಾವಣಾ ಆಯೋಗ ಟಿಎಂಸಿ ಪಕ್ಷದ ಚಿಹ್ನೆ ಪುಟ 2ಕ್ಕೆ

### ಮಮತಾಗೆ ಮತ್ತೆ ಶಾಕ್



**ಕೋಲ್ಕತಾ:** ಟಿಎಂಸಿ ಚಿಹ್ನೆ ವಿಚಾರವಾಗಿ ಈಗಾಗಲೇ ಚುನಾವಣಾ ಆಯೋಗದಿಂದ ಭಾರಿ ಆಘಾತ ಎದುರಿಸಿದ್ದ ಪಶ್ಚಿಮ ಬಂಗಾಳ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಮತ್ತೊಂದು ಆಘಾತ ಆಗಿದೆ.

ಪಶ್ಚಿಮ ಬಂಗಾಳದ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಮತಾ ಬ್ಯಾನರ್ಜಿ ಬಣದಿಂದ ಕಣಕ್ಕಿಳಿದಿದ್ದ ಸಂಚಿತಾ ಪ್ರಧಾನ ದೇ ಶುಕ್ರವಾರ ತಮ್ಮ ನಾಮಪತ್ರ ಹಿಂಪಡೆದುಕೊಂಡಿದ್ದಾರೆ. ನಾಮಪತ್ರ ಹಿಂಪಡೆಯಲು ನಿಗದಿಪಡಿಸಿದ್ದ ಗಡುವಿಗೆ ಒಂದು ದಿನ ಮೊದಲೇ ವಾಪಸ್ ಪಡೆದಿದ್ದಾರೆ. ಇದರೊಂದಿಗೆ ನಂದಿಗ್ರಾಮ ಉಪಚುನಾವಣೆಯಲ್ಲಿ ಮಮತಾ ಬಣಕ್ಕೆ ಅಭ್ಯರ್ಥಿ ಇಲ್ಲದಂತಾಗಿದೆ.

### ಸಿನಿಮಾ ಟಿಕೆಟ್‌ಗೆ ಶೇ.2 ಸೆಸ್

**ಬೆಂಗಳೂರು:** ರಾಜ್ಯದ ಸಿನಿಮಾ ಪ್ರೇಕ್ಷಕರಿಗೆ ಸರ್ಕಾರ ಬಿಗ್ ಶಾಕ್ ನೀಡಿದೆ. ಸಿನಿಮಾ ಟಿಕೆಟ್‌ಗಳ ಮೇಲೆ ಶೇ.2ರಷ್ಟು ಹೆಚ್ಚುವರಿ ಸೆಸ್ (ಉಪಕರ) ವಿಧಿಸಲು ನಿರ್ಧಾರ ಕೈಗೊಂಡಿದೆ. ಈ ಹೊಸ ನಿಯಮ ಸೆಪ್ಟೆಂಬರ್ 30ರಿಂದ ಅಧಿಕೃತವಾಗಿ ಜಾರಿಗೆ ಬರಲಿದೆ.

ರಾಜ್ಯ ಸರ್ಕಾರವು 2024ರಲ್ಲಿ ಮಂಡಿಸಿದ್ದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯ ಕರ್ತರ (ಕ್ಷೇಮಾಭಿವೃದ್ಧಿ) ವಿಧೇಯಕ ಕಕ್ಕೆ ಕೊನೆಗೂ ಚಾಲನೆ ಸಿಕ್ಕಿದೆ. ಮಸೂದೆಗೆ 2024ರ ಸೆಪ್ಟೆಂಬರ್ 23ರಂದು ಕರ್ನಾಟಕದ ರಾಜ್ಯಪಾಲರು ಅಂಕಿತ ಹಾಕಿದ್ದರು. ಅದರ ಮರು ದಿನವೇ, ಅಂದರೆ ಸೆಪ್ಟೆಂಬರ್ 24 ರಂದು ಸರ್ಕಾರದ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಆದರೆ, ಎರಡು ವರ್ಷಗಳ ಸುದೀರ್ಘ ಪ್ರಕ್ರಿಯೆ ಬಳಿಕ ಈ ಅಧಿನಿಯಮವನ್ನು ಜಾರಿಗೆ ತರಲಾಗುತ್ತಿದೆ.

ಹೊಸ ನಿಯಮದ ಪ್ರಕಾರ, ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳಲ್ಲಿ ಸಿನಿಮಾ ನೋಡುವ ಗ್ರಾಹಕರು ಟಿಕೆಟ್ ದರದ ಜೊತೆಗೆ ಶೇ.2 ಸೆಸ್ ಪಾವತಿಸಬೇಕಾಗುತ್ತದೆ. ಸಿನಿಮಾ ಟಿಕೆಟ್ ಮೂಲಕ ಸಂಗ್ರಹವಾಗುವ ಈ ಸೆಸ್ ಹಣವನ್ನು ಸಿನಿಮಾ ಕಾರ್ಮಿಕರ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಯೋಜನೆಗಳಿಗಾಗಿ ಮಾತ್ರ ಬಳಸಲಾಗುತ್ತದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.



### ಅಂಬಾರಿ ಬಸ್‌ನಲ್ಲಿ ಮೆರವಣಿಗೆ

**ಮಂಗಳೂರು:** ರಾಜ್ಯ ಸಚಿವ ಸಂಪುಟ ಸಭೆಗೆ ಆಗಮಿಸಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವರು ನಗರದ ಕದ್ರಿ ದೇವಸ್ಥಾನದಲ್ಲಿ ಮಂಜುನಾಥ ದೇವರಿಗೆ ಪೂಜೆ ಸಲ್ಲಿಸಿದ ನಂತರ ಐರಾವತ ಕ್ಲಬ್ ಕ್ಲಾಸ್ ಬಸ್‌ನಲ್ಲಿ ಸರ್ಕ್ಯೂಟ್ ಹೌಸ್‌ಗೆ ತೆರಳಿದರು. ತೆರೆದ ಅಂಬಾರಿ ಬಸ್‌ನಲ್ಲಿ ಹೊರಟ ಸಿಎಂ ಹಾಗೂ ಸಚಿವರನ್ನು ಪಂಪ್‌ವೆಲ್ ಸರ್ಕಲ್‌ನಿಂದ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಮಹಾವೀರ ವೃತ್ತದಿಂದ ಪಡೀಲ್ ಪ್ರಜಾಸೌಧದ ವರೆಗೆ ಅಲ್ಲಲ್ಲಿ ಕರಾವಳಿಯ ಚಂಡೆವಾದನ, ಹುಲಿವೇಷ, ಗಾರುಡಿಗೊಂಬೆ ಬಳಗಗಳು, ಕೊರಗರ ಕೊಳಲು ವಾದನ, ಬ್ಯಾಂಡ್ ವಾದ್ಯ ತಂಡದವರು ಸಚಿವ ಸಂಪುಟ ಸದಸ್ಯರಿಗೆ ಸ್ವಾಗತ ಕೋರಿದರು.




### ಕದ್ರಿ ಮಂಜುನಾಥನಿಗೆ ಡಿಕೆಶಿ ವಿಶೇಷ ಪೂಜೆ

ಮಂಗಳೂರು: ಮಂಗಳೂರಿಗೆ ಆಗಮಿಸಿರುವ ಸಿಎಂ ಡಿಕೆಶಿ ಅವರು, ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ನಾಡಿನ ಸಮಸ್ತ ಜನರ ಒಳಿತಿಗಾಗಿ, ಮಳೆ– ಬೆಳೆ, ಸಮೃದ್ಧಿಗಾಗಿ ಪ್ರಾರ್ಥಿಸಿದ್ದಾರೆ. ಕದ್ರಿ ದೇವಸ್ಥಾನದ ಗಣಪತಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ದುರ್ಗಾಪರಮೇಶ್ವರಿ ಗುಡಿಯಲ್ಲೂ ಪೂಜೆ ಸಲ್ಲಿಸಿದ ನಂತರ ಕದ್ರಿ ಮಂಜುನಾಥನ ದರ್ಶನ ಪಡೆದು ಸಚಿವ ಸಂಪುಟ ಸಭೆ ನಿರ್ವಿಘ್ನವಾಗಿ ನಡೆಯುವಂತೆ ಪ್ರಾರ್ಥಿಸಿದರು.

## ಡಿಕೆಶಿ ನೋಡಿ ಮತ ಹಾಕ್ತಾರಾ?

### ಒಕ್ಕಲಿಗರ ಶೇ.5ರಷ್ಟು ಮತ ಬರಬಹುದು: ಕೆ.ಎನ್.ರಾಜಣ್ಣ ಟೀಕೆ

**ಬೆಂಗಳೂರು:** ರಾಜ್ಯದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಭಾವದಿಂದಲೇ ಒಕ್ಕಲಿಗರ ಮತ ಕಾಂಗ್ರೆಸ್ ಬರುತ್ತದೆಂದು ನಿರ್ಧರಿಸಲು ಸಾಧ್ಯವಿಲ್ಲ. ಡಿಕೆಶಿಗೆ ಒಕ್ಕಲಿಗರ ಶೇ.5ರಷ್ಟು ಮತ ಬರಬಹುದು ಅಷ್ಟೇ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಟೀಕಿಸಿದ್ದಾರೆ.

ಖಾಸಗಿ ವಾಹಿನಿ ಸಂದರ್ಶನದಲ್ಲಿ ಮಾತನಾಡಿರುವ ಅವರು, ಒಕ್ಕಲಿಗರು ಕೇವಲ ಡಿ. ಕೆ.ಶಿವಕುಮಾರ್ ಅವರನ್ನು ನೋಡಿ ಮತ ಹಾಕುವುದಿಲ್ಲ. ದೇವೇಗೌಡರನ್ನೂ ನೋಡಿಕೊಂಡು ಮತ ಹಾಕುತ್ತಾರೆ. ತಮ್ಮವರು ಅಧಿಕಾರದಲ್ಲಿ ಇರುವುದರಿಂದ ಅಧಿಕಾರಿಗಳು ಅಥವಾ ಮತದಾರರು ಸ್ವಲ್ಪ ಒಲವು ತೋರಿ ಹೆಚ್ಚುವರಿಯಾಗಿ ಶೇ.5ರಷ್ಟು ಮತ ತಂದು ಕೊಡಬಹುದು. ಅದನ್ನು ನಾನು ನಿರಾಕರಿಸುವುದಿಲ್ಲ. ಆದರೆ, ಗೆಲುವಿಗೆ ಬೇಕಾದ ಮತಗಳನ್ನು ಅವರು ತಂದುಕೊಡಬಲ್ಲರೇ ಎಂದು ಪ್ರಶ್ನಿಸಿದ್ದಾರೆ.

ನಾನು ಎಂದಾದರೂ ಕಾಂಗ್ರೆಸ್ ತೊರೆಯುವುದಾದರೆ, ಬಹಿರಂಗವಾಗಿಯೇ ಮಾತನಾಡಿ ಪಕ್ಷವನ್ನು ತೊರೆಯುತ್ತೇನೆ. ಪಕ್ಷದಲ್ಲೇ ಉಳಿದು ದ್ರೋಹ ಮಾಡುವುದಿಲ್ಲ ಎಂದೂ ಸ್ಪಷ್ಟಪಡಿಸಿದ್ದಾರೆ. ಪುಟ 2ಕ್ಕೆ

#### ಸಿದ್ದು ದುರ್ಬಲ ಆದರೆ, ಕಾಂಗ್ರೆಸ್ ಸಹ ದುರ್ಬಲ!

ಕಾಂಗ್ರೆಸ್‌ಗೆ ಮತಗಳನ್ನು ತಂದುಕೊಡುವವರಿದ್ದರೆ ಅದು ಸಿದ್ದರಾಮಯ್ಯ ಮಾತ್ರ. ಸಿದ್ದರಾಮಯ್ಯ ಕಾಂಗ್ರೆಸ್‌ಗೆ, ಯಡಿಯೂರಪ್ಪ ಬಿಜೆಪಿಗೆ ಹಾಗೂ ದೇವೇಗೌಡ ಜೆಡಿಎಸ್‌ಗೆ ತಮ್ಮ ಸಮುದಾಯದ ಬೆಂಬಲದ ಆಧಾರದಲ್ಲಿ ಮತಗಳನ್ನು ತಂದುಕೊಡುತ್ತಾರೆ. ರಾಜ್ಯದಲ್ಲಿ ಹೀಗೆ ಮಾಡಬಲ್ಲ ಮೂವರು ನಾಯಕರು ಎಂದು ತಿಳಿಸಿದರು.

ಕಾಂಗ್ರೆಸ್‌ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಹತ್ವದ ಕುರಿತು ಮಾತನಾಡಿರುವ ಕೆ.ಎನ್.ರಾಜಣ್ಣ ಅವರು, ಸಿದ್ದರಾಮಯ್ಯ ಪುಟ 2ಕ್ಕೆ



## ಗ್ಯಾನೇಂದ್ರನ ಕರಾಳಮುಖ ಬಹಿರಂಗ

### ಕೆಪಿಎಸ್‌ಸಿ ಅಕ್ರಮ ನೇಮಕಾತಿ ಕಿಂಗ್‌ಪಿನ್ ಐಎಎಸ್ ಅಧಿಕಾರಿ

**ಬೆಂಗಳೂರು:** ಕೆಪಿಎಸ್‌ಸಿ ನೇಮಕಾತಿ ಅಕ್ರಮದ ಕಿಂಗ್‌ಪಿನ್, ಐಎಎಸ್ ಅಧಿಕಾರಿ ಗ್ಯಾನೇಂದ್ರ ಅಕ್ರಮ ಸಂಪತ್ತು ಮತ್ತು ಶೋಕಿ ಜೀವನದ ಒಂದೊಂದೇ ಕರಾಳ ಮುಖಗಳು ಸಿಐಡಿ ತನಿಖೆಯಲ್ಲಿ ಬಯಲಾಗುತ್ತಿವೆ.

ಲೂಟಿ ಮಾಡಿದ ಹಣದಲ್ಲಿ ಗೆಳತಿಗೆ ಬರೋಬ್ಬರಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕೊಡಿಸಿರುವುದು ಹಾಗೂ ಆಪ್ತರಿಂದ ವಿದೇಶ ಪ್ರವಾಸದ ಆಫರ್ ಪಡೆದುಕೊಂಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಈ ಹಿಂದೆ ಜುಲೈ ತಿಂಗಳಲ್ಲಿ ಬೆಂಗಳೂರಿನ ಪ್ರತಿಷ್ಠಿತ ಜ್ಯುವೆಲ್ಲರಿಯೊಂದರಲ್ಲಿ ಖರೀದಿಸಿದ್ದ 26 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ಸಿಐಡಿ ಅಧಿಕಾರಿಗಳು ಈಗಾಗಲೇ ಜಪ್ತಿ ಮಾಡಿದ್ದರು. ಈಗ ಓಂಲಕ್ಷ್ಮಿ ಕೋಂಪರೇಟಿವ್ ಸೊಸೈಟಿಯ ಪುಟ 2ಕ್ಕೆ



**ಏರ್ ಟಿಕೆಟ್ ಆಫರ್:** ಅಧಿಕಾರಿಯ ಐಷಾರಾಮಿ ಜೀವನ ಕೇವಲ ಚಿನ್ನಾಭರಣಕ್ಕೆ ಮಾತ್ರ ಸೀಮಿತ ಆಗಿರಲಿಲ್ಲ. ಗ್ಯಾನೇಂದ್ರ ಹಾಗೂ ಅವರ ಕುಟುಂಬದ ವಿದೇಶ ಪ್ರವಾಸಗಳಿಗೆ ಕೆಪಿಎಸ್‌ಸಿ ಹಗರಣದ ಪ್ರಮುಖ ಬಸವರಾಜ್ ಕನ್ನಾಳೆ ವ್ಯವಸ್ಥೆ ಮಾಡುತ್ತಿದ್ದ. ಸಂಪೂರ್ಣ ಫಾರಿನ್ ಟ್ರಿಪ್ ಪ್ಯಾಕೇಜ್, ದುಬಾರಿ ಏರ್ ಟಿಕೆಟ್‌ಗಳ ಖರ್ಚು–ವೆಚ್ಚವನ್ನು ಕನ್ನಾಳೆಯೇ ಭರಿಸುತ್ತಿದ್ದ ಎಂಬ ಆಘಾತಕಾರಿ ಮಾಹಿತಿ ತನಿಖೆಯಲ್ಲಿ ಬಹಿರಂಗಗೊಂಡಿದೆ.

### ಅಕ್ರಮ ಕಲ್ಲು ಗಣಿಗಾರಿಕೆ: ಸಚಿವ ಲಮಾಣಿಗೆ 3 ಕೋಟಿ ದಂಡ



**ಹಾವೇರಿ:** ಕಲ್ಲು ಕ್ವಾರಿ ಪರವಾನಗಿ (ಲೈಸೆನ್ಸ್) ನಿಯಮ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕಲ್ಲು ಕ್ವಾರಿ ಮಾಲೀಕ ರುದ್ರಪ್ಪ ಲಮಾಣಿ ಅವರಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 3 ಕೋಟಿ ರೂ. ದಂಡ ವಿಧಿಸಿದೆ.

ರಾಣೆಬೆನ್ನೂರು ತಾಲೂಕಿನ ಹುಣಸಿಕಟ್ಟಿ ಬಳಿ ಇರುವ ಕಲ್ಲು ಕ್ವಾರಿಗೆ ಸಂಬಂಧಿಸಿದಂತೆ ದಂಡ ವಿಧಿಸಲಾಗಿದೆ. ನಿಗದಿಪಡಿಸಿದ ವ್ಯಾಪ್ತಿ ಮೀರಿ ಹೆಚ್ಚುವರಿಯಾಗಿ ಕಲ್ಲು ತೆಗೆದಿರುವುದು ಹಾಗೂ ಕ್ವಾರಿ ಸುತ್ತಮುತ್ತಲಿನ ಜಾಗವನ್ನು ಒತ್ತುವರಿ ಮಾಡಿಕೊಂಡು ಕಲ್ಲು ಗಣಿಗಾರಿಕೆ ನಡೆಸಿರುವುದು ನಿಯಮ ಉಲ್ಲಂಘನೆ ಎಂದು ಇಲಾಖೆ ನೋಟಿಸ್‌ನಲ್ಲಿ ಉಲ್ಲೇಖಿಸಿದೆ.

ನಿಯಮ ಉಲ್ಲಂಘನೆ ಮಾಡಿರುವುದು ತಪ್ಪು ಎಂದು ಸಚಿವ ಲಮಾಣಿ ಒಪ್ಪಿಕೊಂಡಿದ್ದಾರೆ.

## ಹಾಲು ದರ ಏರಿಕೆಗೆ ಆಗ್ರಹ

### ಸರ್ಕಾರಕ್ಕೆ ಹಾಲು ಉತ್ಪಾದಕರ ಒಕ್ಕೂಟಗಳ ಪ್ರಸ್ತಾವನೆ

**ಬೆಂಗಳೂರು:** ರಾಜ್ಯದ ಜನರಿಗೆ ದರ ಏರಿಕೆ ಬಿಸಿ ಸುಡುತ್ತಿರುವಾಗಲೇ ಮತ್ತೊಂದು ಶಾಕ್ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಹಾಲು ಉತ್ಪಾದಕರ ಒಕ್ಕೂಟ ಲೀಟರ್ ಹಾಲಿಗೆ 8 ರೂ. ಏರಿಕೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿದೆ.

ಈಗಾಗಲೇ ಅಗತ್ಯ ವಸ್ತುಗಳು ಸೇರಿದಂತೆ ವಿವಿಧ ವಸ್ತುಗಳ ಬೆಲೆ ಏರಿಕೆಗಳಿಂದ ಕಂಗಾಲಾಗಿರುವ ಜನ ಸಾಮಾನ್ಯರಿಗೆ ಮತ್ತೊಂದು ಆಘಾತ ಕಾದಿದೆ. ಕಳೆದ ವರ್ಷವಷ್ಟೇ ಏರಿಕೆ ಕಂಡಿದ್ದ ನಂದಿನಿ ಹಾಲಿನ ದರ ಈಗ ಮತ್ತೆ ಬೆಲೆ ಏರಿಕೆಗೆ ಸೈಲೆಂಟ್ ಆಗಿ ಸಜ್ಜಾಗಿದೆ. ಬರೋಬ್ಬರಿ ಲೀಟರ್‌ಗೆ 8 ರೂ. ಏರಿಕೆಗೆ ಹಾಲು ಉತ್ಪಾದಕರ ಸಂಘ ಪ್ರಸ್ತಾವನೆ ಇಟ್ಟಿದೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಮಂಡ್ಯ, ಶಿವಮೊಗ್ಗ, ಚಾಮರಾಜನಗರ, ತುಮಕೂರು ಸೇರಿದಂತೆ ಹಲವು ಹಾಲು ಉತ್ಪಾದಕರ ಒಕ್ಕೂಟ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಪ್ರತಿ ಲೀಟರ್ ಹಾಲಿಗೆ 8 ರೂ. ಹಾಗೂ ರೈತರ ಪ್ರೋತ್ಸಾಹ ಧನವನ್ನು 8 ರೂ.ಗೆ ಏರಿಸಲು ಒತ್ತಾಯಿಸಿದೆ. ಕಳೆದ 8 ತಿಂಗಳಿಂದ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ರೈತರ ಹಿತ ಕಾಪಾಡಬೇಕು. ಹೀಗಾಗಿ ದರ ಏರಿಕೆ ಮಾಡಬೇಕು. ಬೆಲೆ ಹೆಚ್ಚಳ ಮಾಡದಿದ್ದರೆ ಪುಟ 2ಕ್ಕೆ



#### ಪಶು ಆಹಾರ ಬೆಲೆ ಹೆಚ್ಚಳ

ರಾಜ್ಯದಲ್ಲಿ ತೀವ್ರ ಬರಗಾಲವಿದೆ. ಶೇ.70ರಷ್ಟು ಮಳೆ ಕೊರತೆ ಉಂಟಾಗಿದೆ. ಇದರಿಂದ ಹುಲ್ಲಿನ ಕೊರತೆಯಾಗಿದೆ. ಪಶು ಆಹಾರದ ಕಚ್ಚಾ ಸಾಮಗ್ರಿ, ಮೆಕ್ಕೆಜೋಳ, ಇಂಡಿ–ಬೂಸಾದ ದರ ಶೇ.25ರಷ್ಟು ಏರಿಕೆಯಾಗಿದೆ. ರಾಸುಗಳಿಗೆ ಬಳಸುವ ನೆಲಹಾಸು ದರ ಹೆಚ್ಚಳವಾಗಿದೆ. ಪೆಟ್ರೋಲ್, ಡೀಸೆಲ್ ದರವೂ ಏರಿಕೆಯಾಗಿದೆ. ಹೀಗಾಗಿ ದರ ಏರಿಕೆ ಮಾಡಬೇಕು ಎಂದು ಒಕ್ಕೂಟ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

### ಬೆಂ–ಮೈ ಹೆದ್ದಾರಿಯಲ್ಲಿ ಕಾರು ಉರುಳಿಬಿದ್ದು ಮಹಿಳೆ ಸಾವು

**ಮಂಡ್ಯ:** ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ನಿಯಂತ್ರಣ ತಪ್ಪಿದ ಕಾರು ಫ್ಲೈಓವರ್‌ನಿಂದ ಪಲ್ಟಿ ಹೊಡೆದು ಕೆಳಕ್ಕೆ ಬಿದ್ದ ಘಟನೆ ಮಂಡ್ಯದ ಬಳಿ ನಡೆದಿದೆ. ಘಟನೆಯಲ್ಲಿ ಗಾಯಗೊಂಡಿದ್ದ ಮಹಿಳೆ ತೀವ್ರ ರಕ್ತಸ್ರಾವವಾಗಿ ಸಾವನ್ನಪ್ಪಿದ್ದಾರೆ.

ಮೃತ ಮಹಿಳೆಯನ್ನ ಅಂಜನಾ (32) ಎಂದು ಗುರುತಿಸಲಾಗಿದೆ. ಬೆಂಗಳೂರು, ಮೈಸೂರಿನಲ್ಲಿ ಸಾಫ್ಟ್‌ವೇರ್ ಕಂಪನಿ ಹೊಂದಿದ್ದ ಹರೀಶ್ ಅವರ ಪತ್ನಿ ಅಂಜನಾ. ಮೈಸೂರಿಗೆ ಕಾರಿನಲ್ಲಿ ತೆರಳುತ್ತಿದ್ದ ಸಂದರ್ಭ ಅಪಘಾತ ಸಂಭವಿಸಿದೆ.



ವೇಗವಾಗಿ ಬರುತ್ತಿದ್ದ ಕಾರು ನಿಯಂತ್ರಣ ತಪ್ಪಿ ಉಮ್ಮಡಹಳ್ಳಿ ಗೇಟ್ ಸಮೀಪ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಎಕ್ಸ್‌ಪ್ರೆಸ್‌ವೇ ಫ್ಲೈ ಓವರ್‌ನಿಂದ ಹಾರಿದ ಕಾರು ಅಂಡರ್ ಪಾಸ್‌ಗೆ ಬಿದ್ದಿದೆ.

ಅಂಜನಾ ಪತಿ ಹರೀಶ್ ಜೊತೆಗೆ ಮೈಸೂರಿಗೆ ಪ್ರಯಾಣಿಸುತ್ತಿದ್ದರು. ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಅಂಜನಾ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಕಾರು ನಿಯಂತ್ರಣ ಕಳೆದುಕೊಂಡು ಡಿವೈಡರ್‌ಗೆ ಡಿಕ್ಕಿಯಾದ ಪರಿಣಾಮ ಅಂಡರ್‌ಪಾಸ್‌ಗೆ ಬಿದ್ದಿದೆ. ಬೀಳುವಾಗ ಕಾರಿನ ಕಿಟಕಿ ಓಪನ್ ಆಗಿದ್ದರಿಂದ ಅಂಜನಾ ತಲೆ ರಸ್ತೆಗೆ ಬಡಿದಿದೆ. ತೀವ್ರ ರಕ್ತಸ್ರಾವದಿಂದ ಆಸ್ಪತ್ರೆಗೆ ಕರೆದೊಯ್ಯುವ ಮುನ್ನವೇ ಆಕೆ ಸಾವನ್ನಪ್ಪಿದ್ದಾರೆ.

**ಮೊದಲ ಪುಟದಿಂದ**

## ಕಾಂಗ್ರೆಸ್ ಸಹ ದುರ್ಬಲ!

ಬಲಿಷ್ಠರಾಗಿದ್ದರೆ ಕಾಂಗ್ರೆಸ್ ಬಲಿಷ್ಠವಾಗಿರುತ್ತದೆ. ಸಿದ್ದರಾಮಯ್ಯ ದುರ್ಬಲರಾದರೆ ಕಾಂಗ್ರೆಸ್ ದುರ್ಬಲವಾಗುತ್ತದೆ ಎಂದಿದ್ದಾರೆ.

ನಾನು ವಾಸ್ತವಾಂಶ ಎಂದು ಪರಿಗಣಿಸಿದ್ದನ್ನೇ ಹೇಳುತ್ತಿದ್ದೇನೆ. ನನ್ನ ಹೇಳಿಕೆಗಳನ್ನು ಜನರು ವಿಭಿನ್ನ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು ಎಂಬುದನ್ನೂ ಒಪ್ಪಿಕೊಂಡರು. ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ನೀವು ಅದನ್ನು ವರದಿ ಮಾಡುತ್ತೀರಿ. ಬೆಂಗಳೂರಿನಲ್ಲಿರುವ ಜನರು ಹಿತೈಷಿಗಳಾಗಲಿ, ವಿರೋಧಿಗಳಾಗಲಿ, ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡುತ್ತಾರೆ ಎಂದು ಹೇಳಿದ್ದಾರೆ.

## ಕರಾಳಮುಖ ಬಹಿರಂಗ

ಅನುಮಾನಾಸ್ಪದ ಹಣ ವರ್ಗಾವಣೆ ಪರಿಶೀಲನೆ ನಡೆಸಿದಾಗ, ಮತ್ತೆ ಅದೇ ಗೆಳತಿಗೆ 30 ಲಕ್ಷ ರೂ. ಮೌಲ್ಯದ ಆಭರಣಗಳನ್ನು ಖರೀದಿಸಿಕೊಟ್ಟಿರುವುದು ಬೆಳಕಿಗೆ ಬಂದಿದೆ.

ಈ ಅಕ್ರಮ ಹಣದ ವಹಿವಾಟನ್ನು ಖಚಿತಪಡಿಸಿಕೊಂಡಿರುವ ಸಿಐಡಿ, ಚಿನ್ನಾಭರಣಗಳನ್ನು ತಕ್ಷಣವೇ ತನಿಖಾ ಸಂಸ್ಥೆಗೆ ಮರಳಿಸುವಂತೆ ಗೆಳತಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದೆ.

ಸಿಐಡಿ ತನಿಖೆ ನಡುವೆ ಮತ್ತೊಂದೆಡೆ ಜಾರಿ ನಿರ್ದೇಶನಾಲಯ ಕೆಪಿಎಸ್‌ಸಿ ಹಗರಣದ ಬೇರುಗಳನ್ನು ಜಾಲಾಡುತ್ತಿದೆ. ಗ್ಯಾನೇಂದ್ರ ಅವರ ಹಿಂದಿರುವ ಪ್ರಭಾವಿ ಕಿಂಗ್‌ಪಿನ್‌ಗಳಿಗೆ ಕಾನೂನಿನ ಬಿಸಿ ಮುಟ್ಟಿಸಲು ಬಲೆ ಬೀಸಿವೆ.

## ತುಳು ಅಧಿಕೃತ ಭಾಷೆ

ಭಾಷೆ. ರಾಜ್ಯ ಸರ್ಕಾರದಿಂದ ಎರಡನೇ ಅಧಿಕೃತ ಭಾಷಾ ಸ್ಥಾನಮಾನ ಲಭಿಸಿರುವುದು, ಭಾರತೀಯ ಸಂವಿಧಾನದ 8ನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರ್ಪಡೆಗೊಳಿಸುವ ಹೋರಾಟಕ್ಕೆ ಬಲ ಬಂದಂತಾಗಿದೆ. ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಮುಖವಾಗಿ ಮಾತನಾಡುವ ತುಳುವಿಗೆ ಹೆಚ್ಚುವರಿ ಅಧಿಕೃತ ಭಾಷಾ ಮಾನ್ಯತೆ ನೀಡಬೇಕೆಂದು ದಶಕಗಳಿಂದ ತುಳು ಸಾಹಿತ್ಯ ಅಕಾಡೆಮಿ, ತುಳು ಪರ ಸಂಘಟನೆಗಳು, ಸಾಹಿತಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ನಿರಂತರವಾಗಿ ಹೋರಾಟ ಮಾಡಿದ್ದರು.

ತುಳು ಭಾಷೆಗೆ ಅಧಿಕೃತ ಸ್ಥಾನಮಾನ ನೀಡುವ ಸಾಧಕ–ಬಾಧಕಗಳನ್ನು ಪರಿಶೀಲಿಸಲು ಹಿರಿಯ ಶಿಕ್ಷಣ ತಜ್ಞ ಡಾ.ಎಂ. ಮೋಹನ್ ಆಳ್ವ ಅಧ್ಯಕ್ಷತೆಯ ತಜ್ಞರ ಸಮಿತಿ ರಚಿಸಲಾಗಿತ್ತು. ಹೊರ ರಾಜ್ಯಗಳಲ್ಲಿ ಭಾಷಾ ನೀತಿ ಮಾದರಿಗಳನ್ನು ಅಧ್ಯಯನ ಮಾಡಿದ್ದ ಸಮಿತಿ ಸರ್ಕಾರಕ್ಕೆ ವಿಸ್ತೃತ ವರದಿ ಸಲ್ಲಿಸಿತ್ತು.

## ಹಾಲು ದರ ಏರಿಕೆಗೆ ಆಗ್ರಹ

ಮೂರು ದಿನದಲ್ಲಿ ವಿಧಾನಸೌಧ ಚಲೋ ಮಾಡ್ತೀವಿ ಎಂದು ಸರ್ಕಾರಕ್ಕೆ ಎಚ್ಚರಿಸಿದ್ದಾರೆ. ಹಾಲಿನ ದರ ಏರಿಕೆ ಪ್ರಸ್ತಾವನೆಗೆ ಒಕ್ಕೂಟ ನಾನಾ ಕಾರಣಗಳನ್ನು ನೀಡಿದೆ. ರಾಜ್ಯದಲ್ಲಿ ತೀವ್ರ ಬರಗಾಲ ಇದ್ದು, ರೈತರು ಸಂಕಷ್ಟದಲ್ಲಿದ್ದಾರೆ. ಹೀಗಾಗಿ ರೈತರಿಗೆ ನೆರವಾಗಲು ದರ ಏರಿಕೆ ಮಾಡಬೇಕೆಂದು ಆಗ್ರಹಿಸಿದ್ದಾರೆ.

## ಕರಾವಳಿಗೆ 32 ಸಾವಿರ ಕೋಟಿ

ತಿಂಗಳಲ್ಲಿ ಅಭಿಪ್ರಾಯ ನೀಡಬಹುದಾಗಿದೆ ಎಂದು ತಿಳಿಸಿದರು.

ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2026 ಜಾರಿಗೊಳಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಹೊಸ ಪ್ರವಾಸೋದ್ಯಮ ನೀತಿಯಿಂದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಇದರಿಂದ ಮೂಲ ಸೌಲಭ್ಯ ಅಭಿವೃದ್ಧಿಗೆ ಒಳಿತಾಗಲಿದೆ ಎಂದು ಅವರು ಹೇಳಿದರು. ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಪ್ರವಾಸೋದ್ಯಮ ಮಂಡಳಿ ಸ್ಥಾಪಿಸಲಾಗುವುದು. ಇದಕ್ಕಾಗಿ 500 ಕೋಟಿ ರೂ ಅನುದಾನ ಮೀಸಲಿಡಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಿದ್ವಾಯಿ ಮತ್ತು ಜಯದೇವ ಆಸ್ಪತ್ರೆ ಆರಂಭಿಸಬೇಕು ಎಂಬ ಬೇಡಿಕೆ ಇದೆ. ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು. ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಮಾತನಾಡಿ, ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಪಾಲಕ, ಅರಣ್ಯ ರಕ್ಷಕ, ಅರಣ್ಯ ವೀಕ್ಷಕ ನೇಮಕಾತಿಯಲ್ಲಿ ಆದಿವಾಸಿ ಬುಡಕಟ್ಟು ಸಮಾಜದವರಿಗೆ ಶೇ.30ರಷ್ಟು ಮೀಸಲಾತಿ ಕಲ್ಪಿಸಲು ಸಚಿವ ಸಂಪುಟ ತೀರ್ಮಾನಿಸಲಾಗಿದೆ ಎಂದು ಹೇಳಿದರು.

## ‘ಮಮತಾ ಟಿಎಂಸಿ’ ಹೆಸರು: ಫುಟ್‌ಬಾಲ್ ಆಟಗಾರನ ಚಿಹ್ನೆ

ಹಾಗೂ ಲೋಗೋವನ್ನು ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಅಂತಿಮ ತೀರ್ಮಾನ ಕೈಗೊಳ್ಳುವವರೆಗೆ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಹೆಸರು ಮತ್ತು ಹೂವು ಮತ್ತು ಹುಲ್ಲು ಚಿಹ್ನೆಯನ್ನು ಯಾವುದೇ ಬಣ ಬಳಸುವಂತಿಲ್ಲ ಎಂದು ಆಯೋಗ ಆದೇಶಿಸಿದೆ.

# ಬಿಜೆಪಿ ಸೇರಿದ ಸೋಮಶೇಖರ್



ಚಾಮರಾಜನಗರ:ನಿವೃತ್ತ ಪ್ರಾಧ್ಯಾಪಕ ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗ್ರಾಮದ ಡಾ. ಎನ್.ಸೋಮಶೇಖರ್ ಅವರು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಅವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು.

ನಗರದ ಮುದುಕುಮಾರಮ್ಮ ದೇವಸ್ಥಾನ ಮುಂಭಾಗದಲ್ಲಿ ಬಿಜೆಪಿಗೆ ಸೇರ್ಪಡೆಯಾದ ಸೋಮಹಳ್ಳಿ ಸೋಮಶೇಖರ್ ಅವರಿಗೆ ಪಕ್ಷದ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಪಕ್ಷದ ಶಲ್ಯ ಹಾಕಿ ಸ್ವಾಗತಿಸಿ ಪಕ್ಷಕ್ಕೆ ಬರಮಾಡಿಕೊಂಡರು. ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡು, ಪಕ್ಷದ ಬೆಳವಣಿಗೆಗೆ ಕೆಲಸ ಮಾಡುವಂತೆ ಸಲಹೆ ನೀಡಿದರು. ಬಿಜೆಪಿಗೆ ಸೇರ್ಪಡೆಯಾದ ಸೋಮಹಳ್ಳಿ ಸೋಮಶೇಖರ್ ಮಾತನಾಡಿ, ಭಾರತದ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವ ಪ್ರದರ್ಶಿಸಿ ವಿಶ್ವನಾಯಕರಾಗಿರುವ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವವನ್ನು ಮೆಚ್ಚಿಕೊಂಡು ಬಿಜೆಪಿ ಸೇರ್ಪಡೆಯಾಗಿದ್ದೇನೆ. ಪಕ್ಷದ ಸಂಘಟನೆಗೆ ಒತ್ತು ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು, ಬಿಜೆಪಿ ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಮುಖಂಡ ಆರ್.ಸುಂದರ್, ಎ. ಆರ್.ಬಾಬು. ಎಂ.ಎಸ್.ಚಂದ್ರಶೇಖರ್ ರಾಮಸಮುದ್ರಶಿವಣ್ಣ, ಕಿಲಗೆರೆಶಶಿ ಇತರರು ಹಾಜರಿದ್ದರು.

# ಗ್ರಂಥಾಲಯ ಜ್ಞಾನದ ಶಕ್ತಿಕೇಂದ್ರ



ಮೈಸೂರು: ನಗರ ಕೇಂದ್ರ ಗ್ರಂಥಾಲಯ, ಮೈಸೂರು ಹಾಗೂ ಬೆಂಗಳೂರಿನ ಜ್ಞಾನ ಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಸಂಯುಕ್ತಾಶ್ರಯದಲ್ಲಿ ಸೆ.20 ರಂದು ನಡೆಯಲ್ಲಿರುವ ಕೆ.ಎಸ್. ಆರ್.ಪಿ ಕಾನ್ಸಟೇಬಲ್‌ಗಳ ಲಿಖಿತ ಪರೀಕ್ಷೆಗೆ ಪೂರಕವಾಗಿ ಅಣುಕು ಪರೀಕ್ಷೆಯನ್ನು ನಡೆಸಲಾಯಿತು. ಅಣುಕು ಪರೀಕ್ಷೆಗೆ 50ಕ್ಕೂ ಹೆಚ್ಚು ಅಭ್ಯರ್ಥಿಗಳು ಹಾಜರಾಗಿದ್ದರು.

ಸದರಿ ಅಣುಕು ಪರೀಕ್ಷೆಗೆ ಚಾಲನೆ ನೀಡಿದ ಮೈಸೂರಿನ ಕೆ.ಎಸ್.ಆರ್.ಪಿ 5ನೇ ಪಡೆಯ ಸಹಾಯಕ ಕಮಾಂಡೆಂಟ್ ಬಿ.ಪ್ರಕಾಶ್ ಮಾತನಾಡಿ, “ಗ್ರಂಥಾಲಯಗಳು ಜ್ಞಾನದ ಶಕ್ತಿ ಕೇಂದ್ರಗಳು, ಅದನ್ನು ನಂಬಿದವರಿಗೆ ಶಾರದಾಂಬೆ ಕೈ ಬಿಡುವುದಿಲ್ಲ” ಮುಂದುವರೆದು ಅಭ್ಯರ್ಥಿಗಳು ತಾಳ್ಮೆ, ಶಿಸ್ತು ಹಾಗೂ ಪರಿಶ್ರಮದಿಂದ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಿದಲ್ಲಿ ಯಶಸ್ಸು ಪಡೆಯುವುದು ನಿಶ್ಚಿತ ಎಂದರು. ತಾವು 15 ವರ್ಷಗಳ ಹಿಂದೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರ ಕೇಂದ್ರ ಗ್ರಂಥಾಲಯಕ್ಕೆ ಪ್ರತಿನಿತ್ಯ ಭೇಟಿ ನೀಡಿ ಅದರ ಸಂಪೂರ್ಣ ಉಪಯೋಗವನ್ನು ಪಡೆದ ರೀತಿಯನ್ನು ವಿಸ್ತಾರವಾಗಿ ವಿವರಿಸಿದರು. ಪ್ರತಿಯೊಬ್ಬ ಉದ್ಯೋಗಾಂಕ್ಷಿಯು ಅದೇ ರೀತಿ ಗ್ರಂಥಾಲಯಗಳನ್ನು ಸದುಪಯೋಗ ಬಳಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಸಮರೋಪದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಹಾಗೂ ಅಪರ ದಂಡಾಧಿಕಾರಿ ಆರ್.ಐಶ್ವರ್ಯ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ‘ಮಹಾತ್ಮ ಗಾಂಧೀಜಿಯವರ ಆಸೆಯಂತೆ ನಾವು ಜನಪರ ಸೇವೆಯನ್ನು ಮಾಡಬೇಕೆಂದು ಕರೆ ನೀಡಿದರು. ಗಾಂಧೀಜಿಯವರು ಹೇಳಿದಂತೆ ಸಮಾಜದ ಕಟ್ಟ ಕಡೆಯ ಮನುಷ್ಯನ ಆಸೆ ಈಡೇರಿಕೆ ಹಾಗೂ ಆತನ ಮುಖದಲ್ಲಿ ನಗು ಮೂಡುವಂತೆ ಸೇವೆ ಸಲ್ಲಿಸಬೇಕು ಎಂದರು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳು ಯಾವುದೇ ಸಂದರ್ಭದಲ್ಲೂ ಎದೆ ಗುಂದಬಾರದು. ಯಾವುದೇ ಅಂಜಿಕೆಯನ್ನು ಹೊಂದಿರಬಾರದು. ಯಶಸ್ವಿ ಆಗಲಿ, ಆಗದಿರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದನ್ನು ಬಿಡಬಾರದು ಎಂದರು.

ಉಪನಿರ್ದೇಶಕ ಬಿ.ಮಂಜುನಾಥ್ ಮಾತನಾಡಿ ಸಿವಿಲ್ ಸಿಎಆರ್, ಡಿಎಆರ್ ಹಾಗೂ ಕೆ.ಎಸ್. ಆರ್.ಪಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಇಲ್ಲಿಯ ತನಕ ಒಟ್ಟು 10 ಅಣುಕು ಪರೀಕ್ಷೆಗಳನ್ನು ನಡೆಸಲಾಗಿದೆ. ಎಂದರು. ಕಾರ್ಯಕ್ರಮದಲ್ಲಿ ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯ ರಮೇಶ್ ನರಸಯ್ಯ, ಗ್ರಂಥಪಾಲಕಿ ಎಸ್.ಸೌಮ್ಯ ಇನ್ನಿತರರು ಉಪಸ್ಥಿತರಿದ್ದರು.

# ಹೊಸಕೆರೆಗೆ ಬಾಗಿನ ಅರ್ಪಣೆ

## ಏತ ನೀರಾವರಿ ಯೋಜನೆಗಳ ಮೂಲಕ ಕಸಬಾ–ಕೈಲಾಂಚ ಹೋಬಳಿಗಳ



ರಾಮನಗರ: ಕೈಲಾಂಚ ಹೋಬಳಿಯ ವಡ್ಡರಹಳ್ಳಿಯ ಹೊಸಕೆರೆ ತುಂಬಿದ್ದು, ಶಾಸಕ ಇಕ್ಬಾಲ್ ಹುಸೇನ್ ಶುಕ್ರವಾರ ಬಾಗಿನ ಅರ್ಪಿಸಿದರು. ಈ ವೇಳೆ ಮಾತನಾಡಿದ ಅವರು, ಏತ ನೀರಾವರಿ ಯೋಜನೆ ಮೂಲಕ ಕೆರೆ ತುಂಬಿದೆ, ಈ ಭಾಗದಲ್ಲಿ ಕೃಷಿಗೆ ಉಪಯುಕ್ತವಾಗಲಿದೆ, ರೈತರಿಗೆ ಉಪಯುಕ್ತವಾಗುವ ಯೋಜನೆಗಳನ್ನು ರೂಪಿಸುವುದು ತಮ್ಮ ಉದ್ದೇಶ ಎಂದು ಶಾಸಕರು ಸಾರ್ಥಕ ಭಾವನೆ ವ್ಯಕ್ತಪಡಿಸಿದರು.

### ಚೆಕ್ ಡ್ಯಾಂ ಕಮ್ ಬ್ರಿಡ್ಜ್

ವಡ್ಡರಹಳ್ಳಿಯ ಹೊಸ ಕೆರೆಗೆ ಏತ ನೀರಾವರಿ ಮೂಲಕ ನೀರು ಹರಿಸಲಾಗುತ್ತಿದೆ. 10 ಕೋಟಿ ರೂ ವೆಚ್ಚದಲ್ಲಿ ಏತ ನೀರಾವರಿ ಯೋಜನೆ ಜಾರಿಯಾಗಿದೆ. ಅರ್ಕಾವತಿ ನದಿಯಿಂದ ವಡ್ಡರಹಳ್ಳಿ ಹೊಸಕೆರೆಗೆ ನೀರು ಹರಿಯುತ್ತಿದೆ. ಚೆಕ್ ಡ್ಯಾಮ್ ಕಮ್ ಬ್ರಿಡ್ಜ್ ಸಹ ನಿರ್ಮಾಣಗೊಂಡಿದೆ. ಸುಮಾರು 45 ಎಕರೆ ವಿಸ್ತೀರ್ಣ ಹೊಂದಿರುವ ಕೆರೆಯ ನೀರಿನಿಂದ ಅಂದಾಜು 590 ಎಕರೆ ಅಚ್ಚುಕಟ್ಟು ಪ್ರದೇಶಗಳಿಗೆ ನೀರುಣಿಸಲು ನೆರವಾಗಲಿದೆ ಎಂದು ಹೇಳಿದರು.

### ರೈತರ ಬದುಕು ಹಸಿರು

ಅರ್ಕಾವತಿ ನದಿಯಿಂದ ಏತನೀರಾವರಿ ಯೋಜನೆ ಮೂಲಕ ಕಸಬಾ–ಕೈಲಂಚಾ ಭಾಗದ ಕೆರೆಗಳಿಗೆ ನೀರು ತುಂಬಿಸುತ್ತಿರುವುದರಿಂದ ಅಂತರ್ಜಲ ವೃದ್ಧಿಯ ಜೊತೆಗೆ ರೈತರ ಬದುಕು ಹಸಿರಾಗುತ್ತಿದೆ. ಡಿ. ಕೆ.ಸುರೇಶ್ ಅವರು ಸಂಸದ ರಾಗಿದ್ದ ಸಮಯದಲ್ಲಿ ವಡ್ಡರಹಳ್ಳಿ, ಕಾಳೇಗೌಡನ ದೊಡ್ಡಿ ಏತ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ ನೀಡಿದ್ದರು. ರೈತರು ತಮ್ಮ ಕೃಷಿ ಚಟುವಟಿಕೆಗಳಿಗೆ ಬಯಸುವುದು ನೀರಿನ ವ್ಯವಸ್ಥೆ. ಇಂತಹ ಯೋಜನೆಗಳನ್ನು ಹಮ್ಮಿಕೊಂಡು ರೈತನ ಬದುಕಿಗೆ ನೆರವಾಗುವುದು ನನ್ನ ಗುರಿ ಎಂದರು.

### 1 ಸಾವಿರ ಎಕರೆ ಕೃಷಿ ಭೂಮಿಗೆ ನೀರಿನ ಗುರಿ

ಈಗಾಗಲೇ ಮೊಟ್ಟೆದೊಡ್ಡಿ ಏತ ನೀರಾವರಿ ಯೋಜನೆಗೆ ಚಾಲನೆ ನೀಡಿದ್ದು, 500 – 600 ಎಕರೆ ಕೃಷಿ ಪ್ರದೇಶಕ್ಕೆ ನೀರು ಹಾಯಿಸಲಾಗುತ್ತಿದೆ. ಇದನ್ನು ಲಕ್ಕಪ್ಪನಹಳ್ಳಿ ವರೆಗೆ ಅಂದರೆ 900 ರಿಂದ 1 ಸಾವಿರ ಎಕರೆಯಷ್ಟು ಕೃಷಿ ಪ್ರದೇಶಕ್ಕೂ ನೀರಾವರಿ ವ್ಯವಸ್ಥೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದ್ದು, ಶೀಘ್ರದಲ್ಲಿಯೇ ಆ ಕಾರ್ಯವೂ ಪೂರ್ಣಗೊಳ್ಳಲಿದೆ. ಕಾಳೇಗೌಡನದೊಡ್ಡಿ ಏತ ನೀರಾವರಿ ಯೋಜನೆ 28 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಅದರ ಕಾಮಗಾರಿ ಅಂತಿಮ ಹಂತ ತಲುಪಿದೆ. 124 ಕೋಟಿ ರುಪಾಯಿ ವೆಚ್ಚದಲ್ಲಿ ಗಾಣಾಳು ಏತ ನೀರಾವರಿ ಯೋಜನೆಗೆ ಚಾಲನೆ ನೀಡಿದ್ದೇವೆ. ಇದೀಗ ಕೆ.ಪಿ.ದೊಡ್ಡಿಯಲ್ಲಿಯೂ ಏತ ನೀರಾವರಿ ಯೋಜನೆಗೆ ಬೇಡಿಕೆ ಬಂದಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಸುಮಾರು 16 ಕೋಟಿ ವೆಚ್ಚದಲ್ಲಿ ಆ ಯೋಜನೆಯನ್ನೂ ಕಾರ್ಯಗತಗೊಳಿಸಿದರೆ ಸುಮಾರು 1 ಸಾವಿರ ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗುತ್ತದೆ. ವಿಶೇಷ ಅಧಿವೇಶನದಲ್ಲಿ ಸಚಿವರ ಮನವೊಲಿಸಿ ಕೆ.ಪಿ.ದೊಡ್ಡಿ ಏತನೀರಾವರಿ ಯೋಜನೆಗೆ ಅನುಮೋದನೆ ಪಡೆಯುತ್ತೇನೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

### ಭಕ್ತಿಯಿಂದ ಬಾಗಿನ ಅರ್ಪಣೆ

ನಾವೆಲ್ಲರು ರೈತರ ಮಕ್ಕಳು. ರೈತರ ಬದುಕು ಹಸನಾಗಬೇಕಾದರೆ ನೀರು ಅತಿಮುಖ್ಯ. ನೀರಿಲ್ಲದಿದ್ದರೆ ಹಸಿರಿಲ್ಲ, ಹಸಿರಿಲ್ಲದಿದ್ದರೆ ಉಸಿರು ಇರಲ್ಲ. ಹಸಿರು ಉಸಿರು ನೀರು ಎಲ್ಲವೂ ಭಗವಂತ ಕೊಟ್ಟ ವರ. ನಾನು ಸಹ ರೈತನ ಮಗನಾಗಿ, ಕ್ಷೇತ್ರದ ಸೇವಕನಾಗಿ ಇಂತಹ ರೈತ ಪರವಾದ ಕೆಲಸಗಳು ಖುಷಿ ತರುತ್ತದೆ. ಕೈಲಾಂಚ ಮತ್ತು ಕಸಬಾ ಹೋಬಳಿಯ ಎಲ್ಲ ಕೆರೆಗಳನ್ನು ತುಂಬಿಸಿ, ರೈತರ ಮೊಗದಲ್ಲಿ ನಗು ನೋಡುವುದು ತಮ್ಮ ಉದ್ದೇಶ ಎಂದು ಇಕ್ಬಾಲ್ ಹುಸೇನ್ ತಿಳಿಸಿದರು.

ಕೃಷಿಕರ ಬದುಕು ಹಸಿರಾಗಿದ್ದರೆ ಮಾತ್ರ ನಮ್ಮೆಲ್ಲರಿಗೂ ಉಸಿರು ಸಿಗುತ್ತದೆ. ಅವರ ಬದುಕನ್ನು ಅರ್ಥಮಾಡಿಕೊಂಡು ಬೇಡಿಕೆಗಳನ್ನು ಈಡೇರಿಸಿದರೆ ಮಾತ್ರ ಚುನಾಯಿತ ಪ್ರತಿನಿಧಿಯಾಗಿದ್ದಕ್ಕೆ ಸಾರ್ಥಕ, ಆ ಬದ್ಧತೆ ಇಟ್ಟುಕೊಂಡೇ ಕ್ಷೇತ್ರದಲ್ಲಿ ರೈತಪರ, ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದು, ಹಲವು ದಿನಗಳ ರೈತರ ನೋವನ್ನು ನಿವಾರಿಸಲು ಇಂದು ಹೊಸ ಕೆರೆ ತುಂಬಿಸುವ ಕಾಲ ಕೂಡಿ ಬಂದಿದೆ. ಭಕ್ತಿಯಿಂದ ಕೆರೆಗೆ ಬಾಗಿನ ಅರ್ಪಿಸಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಎನ್. ಆರ್.ವೆಂಕಟೇಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು, ತಾಲೂಕು ಅಧ್ಯಕ್ಷ ವಿ.ಎಚ್.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಹುಲಿಕೆರೆ ಗುನ್ನೂರು ಗ್ರಾಪಂ ಮಾಜಿ ಅಧ್ಯಕ್ಷ ಗಿರೀಶ್, ನಗರಸಭೆ ಸದಸ್ಯ ಬೈರೇಗೌಡ, ಸಾಗುವಳಿ ಸಮಿತಿ ಸದಸ್ಯ ರವಿ, ಮುಖಂಡರಾದ ಗುರುಪ್ರಸಾದ್, ಚನ್ನಮಾನಹಳ್ಳಿ ಶ್ರೀನಿವಾಸ್, ವಡ್ಡರಹಳ್ಳಿ ಗಿರಿ, ವೆಂಕಟೇಶ್, ಕೈಲಾಂಚ ಗಿರೀಶ್, ಕೆಂಪರಾಮು, ದಾಸೇಗೌಡ, ಚೇತನ್, ನಾಗೇಶ್, ಚಿಕ್ಕೇಗೌಡ, ಸಣ್ಣ ನೀರಾವರಿ ಇಲಾಖೆ ಎಇಇ ಕೊಟ್ರೇಶ್, ಇಂಜಿನಿಯರ್ ನೂತನ್, ಪಿಡಿಒ ಕುಮಾರ್ ಮತ್ತಿತರರು ಇದ್ದರು.

# ದಸರಾ ಉದ್ಘಾಟಕರ ಹುಡುಕಾಟ..!

## ಪಟ್ಟಿಯಲ್ಲಿವೆ ಸಾಲು, ಸಾಲು ಅಚ್ಚರಿ ಹೆಸರುಗಳು







ಮೈಸೂರು: ನಾಡಹಬ್ಬ ದಸರೆಯನ್ನು ಈ ಬಾರಿ ಬರಗಾಲದ ನಡುವೆಯೂ ವಿಭಿನ್ನವಾಗಿ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸಿದ್ದು, ನಾಡಹಬ್ಬ ಉದ್ಘಾಟನೆಗೆ 24 ದಿನಗಳಷ್ಟೇ ಬಾಕಿ ಉಳಿದಿದೆ. ಇಂತಹ ವೇಳೆ ದಸರಾ ಉದ್ಘಾಟಕರಿಗಾಗಿ ಹುಡುಕಾಟ ನಡೆದಿದ್ದು, ಧಾರ್ಮಿಕ, ಸಿನಿಮಾ, ರಾಜಕೀಯ, ಕ್ರೀಡೆ, ನ್ಯಾಯಾಂಗ ಸೇರಿ ಅನೇಕರ ಅಚ್ಚರಿಯ ಹೆಸರುಗಳ ಸಾಲು ಸಾಲೇ ಪಟ್ಟಿಯಲ್ಲಿದ್ದು ಅಂತಿಮವಾಗಿ ಯಾರ ಹೆಸರು ಹೊರ ಬರಲಿದೆ ಎಂಬ ಕೂತೂಹಲಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಸ್ಪಷ್ಟಪಡಿಸಿಬೇಕಿದೆ.

ವಿಶ್ವವಿಖ್ಯಾತ ದಸರೆ ಉದ್ಘಾಟಕರನ್ನಾಗಿ ಎಲ್ಲಾ ಕ್ಷೇತ್ರದಿಂದಲೂ ಈವರೆಗೆ ಆಯ್ಕೆ ಮಾಡಿಕೊಂಡು ಬರಲಾಗಿದೆ. ಇದರಲ್ಲಿ ಹೊಸತೇನೂ ಇಲ್ಲ. ಆದರೆ, ದಸರಾ ಉನ್ನತ ಸಮಿತಿ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಈ ಬಾರಿ ಉದ್ಘಾಟಕರ ಆಯ್ಕೆಯ ವಿವೇಚನೆ ಬಿಡಲಾಗಿದೆ. ಇಂತಹ ವೇಳೆ ಸಾಕಷ್ಟು ಹೆಸರುಗಳು ಚರ್ಚೆ, ಚಾಲ್ತಿಗೆ ಬರುತ್ತಿದ್ದು, ಯಾವ ಹೆಸರು ಅಂತಿಮಗೊಳಲಿದೆ ಎಂಬುದು ಮಾತ್ರ ಇಂದಿಗೂ ಅಂತಿಮವಾಗಿಲ್ಲ. ಮಾತ್ರವಲ್ಲದೆ, ಇಂದಿಗೂ ದಸರಾ ಉದ್ಘಾಟಕರ ಹುಡುಕಾಟ ನಡೆಯುತ್ತಿರುವುದು ವಿಶೇಷ.

ಸಾಲು ಸಾಲು ಹೆಸರು: ಕಳೆದ ಹಲವು ವರ್ಷಗಳಿಂದ ಒಂದಷ್ಟು ಹೆಸರುಗಳು ಚರ್ಚೆಗೆ ಬರುತ್ತಿವೆಯಾದರೂ ಅಂತಿಮಗೊಳ್ಳುತ್ತಿಲ್ಲ. ಇಂತಹ ವೇಳೆ ಮತ್ತಷ್ಟು ಸಾಲು ಹೆಸರುಗಳು ಸೇರಲಾರಂಭಿಸಿರುವುದು ಆಯ್ಕೆ ಮಾಡುವವರಿಗೂ ತಲೆನೋವಾಗಿ ಪರಿಗಣಮಿಸಿದೆ. ಅದರಲ್ಲೂ ಸಮಾಜ, ಸಮುದಾಯ, ರಾಜಕೀಯ ಸಮೀಕರಣ ಹೀಗೆ ನಾನಾ ವಿಧದಲ್ಲೂ ಹೆಸರುಗಳು ಮುನ್ನಲೆಗೆ ಬರುತ್ತಿರುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗೇ ಆಗುತ್ತಾರೆಂದು ಭವಿಷ್ಯ ನುಡಿದಿದ್ದ ಡಿಕೆಶಿಯವರ ಗುರುಗಳಾದ ತುಮಕೂರು ಜಿಲ್ಲೆಯ ತಿಪತರು



ತಾಲೂಕಿನ ನೊಣವಿನಕೆರೆಯ ಶ್ರೀ ಕಡಸಿದ್ಧೇಶ್ವರ ಮಠದ (ಅಜ್ಜಯ್ಯನ ಮಠ) ಸಂತರಾದ ವೀರ ಗಂಗಾಧರ ಅಜ್ಜಯ್ಯರ ಹೆಸರು ಮುಂಚೂಣಿಯಲ್ಲಿದೆ. ಇವರೊಟ್ಟಿಗೆ ಶಾಸಕ ಶ್ರೀವತ್ಸ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಹೆಸರನ್ನು ದಸರಾ ಸಮಿತಿ ಸಭೆಯಲ್ಲೇ ಪ್ರಸ್ತಾಪಿಸಿದ್ದಾರೆ. ಯತೀಂದ್ರ ಸಿದ್ದರಾಮಯ್ಯ ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

ಇನ್ನೂ ಮತ್ತೊಂದೆಡೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ನಟ ರಜನಿಕಾಂತ್, ಕ್ರಿಕೆಟ್ ಆಟಗಾರರಾದ ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಸಚ್ಚಿನ್ ತೆಂಡಲ್ಕೂರ್ ಹೆಸರು ಮುನ್ನಲೆಯಲ್ಲಿವೆ. ಮತ್ತೊಂದೆಡೆ ಕಾಂಗ್ರೆಸ್ ಕಾರ್ಯಕರ್ತರು ಸೋನಿಯಾಗಾಂಧಿಯವರಿಂದಲೂ ದಸರಾ ಉದ್ಘಾಟಿಸಬಹುದೆಂಬ ಸಲಹೆ ನೀಡಲಾರಂಭಿಸಿದ್ದಾರೆ. ಮತ್ತೊಂದೆಡೆ ದಿ.ಪುನೀತ್ ರಾಜುಕಮಾರ್ ನೆನಪಿನಾರ್ಥ ಅವರ ಪತ್ನಿ ಅಶ್ವಿನಿ ಪುನೀತ್ ರಾಜಕುಮಾರ್ ಹೆಸರು ಕೇಳಿ ಬರುತ್ತಿದೆ. ಮಾತ್ರವಲ್ಲದೆ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಂಡ್ಯ ಮಗಳಾದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನರನ್ನು ಆಯ್ಕೆ ಮಾಡುವಂತೆ ಕೋರಿದ್ದಾರೆ. ಹೀಗೆ ದಸರಾ ಉದ್ಘಾಟನೆಗೆ ದಿನಗಣನೇ ಶುರುವಾದಂತೆ ಉದ್ಘಾಟಕರ ಹೆಸರುಗಳ ಪಟ್ಟಿಯೇ ಜೋರಾಗಲಾರಂಭಿಸಿದ್ದು, ಅಂತಿಮ ಆಯ್ಕೆ ಮಾತ್ರ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರ ಸುತ್ತಲೇ ತೀರ್ಮಾನ ಆಗುವುದು ಬಹುತೇಕ ಖಚಿತವಾಗಿದೆ.

### ದೇವೇಗೌಡರಿಂದ ಸಿಎಂ “ಪಾಲ್ಗೊಳ್ಳುವಿಕೆ” ಪ್ರಾರಂಭ

ಹಿಂದೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯ ಮಂತ್ರಿ ಭಾಗವಹಿಸುತ್ತಿರಲಿಲ್ಲ. 1995ರಲ್ಲಿ ಮುಖ್ಯ ಮಂತ್ರಿಯಾಗಿದ್ದ ಎಚ್.ಡಿ.ದೇವೇಗೌಡರು ಪಾಲ್ಗೊಂಡಿದ್ದರು. 2008ರಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂ ರಪ್ಪ ದೇವೇಗೌಡರ ನಂತರ ಪಾಲ್ಗೊಂಡಿದ್ದಲ್ಲದೆ ಸತತ ಮೂರು ವರ್ಷವೂ ಭಾಗವಹಿಸಿದ್ದರು. ಬಳಿಕ ಮುಖ್ಯಮಂತ್ರಿಗಳಾದ ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ ಸಂಪ್ರದಾಯ ಮುಂದುವರಿಸಿದರು. ಮೈಸೂರಿ ನವರೇ ಆದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ 2013ರಿಂದ 2017ರವರೆಗೆ ಸತತ ಐದು ವರ್ಷವೂ ಉದ್ಘಾಟನೆ ಹಾಗೂ ಜಂಬೂ ಸವಾರಿ ಯಲ್ಲಿ ಭಾಗವಹಿಸಿ ದಾಖಲೆ ಬರೆದಿದ್ದರು. 2018 ರಲ್ಲಿ ಎಚ್. ಡಿ. ಕುಮಾರಸ್ವಾಮಿ, 2019, 2020 ರಲ್ಲಿ ಮತ್ತೆ ಬಿ.ಎಸ್. ಯಡಿಯೂರಪ್ಪ ಅವರು ಎರಡು ಬಾರಿ ಬಂದಿದ್ದರು. 2022 ರಲ್ಲಿ ಬಸವ ರಾಜ ಬೊಮ್ಮಾಯಿ ಭಾಗವಹಿಸಿದ್ದರು. ಮತ್ತೆ 2023ರಿಂದ 2026ರವರೆಗೆ ಸಿದ್ದರಾಮಯ್ಯ ಪಾಲ್ಗೊಂಡು ಮತ್ತೆ ದಾಖಲೆ ಬರೆದರು. ಸದ್ಯ ಅನೇಕ ಬಾರಿ ಸಚಿವರಾಗಿ, ಉಪಮುಖ್ಯಮಂತ್ರಿ ಯಾಗಿ ದಸರೆ ನೋಡಿರುವ ಡಿ. ಕೆ.ಶಿವಕುಮಾರ್ ಮುಖ್ಯಮಂತ್ರಿಗಳಾಗಿ ಚೊಚ್ಚಲ ದಸರೆಯ ಸಿದ್ಧತೆ ನಡೆಸಿರುವುದು ವಿಶೇಷ.

### ಈವರೆಗೆ ಯಾರೆಲ್ಲಾ ಉದ್ಘಾಟನೆ



1988ರಲ್ಲಿ ರಾಜ್ಯಪಾಲರಾಗಿದ್ದ ಪಿ.ವೆಂಕಟಸುಬ್ಬಯ್ಯ, 1990ರಲ್ಲಿ ರಾಷ್ಟ್ರಪತಿ ರಾಮಸ್ವಾಮಿ ವೆಂಕಟರಾಮನ್, 1993ರಲ್ಲಿ ನಟ ಡಾ.ರಾಜ್‌ಕುಮಾರ್, 2003ರಲ್ಲಿ ನಟ ಅಂಬರೀಶ್, 2008ರಲ್ಲಿ ತುಮಕೂರು ಸಿದ್ದಗಂಗಾ ಮಠದ ಶತಾಯುಷಿ ಡಾ.ಶಿವಕುಮಾರ ಸ್ವಾಮೀಜಿ, 2009ರಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಂಸ್ಥಾಪಕ ಶ್ರೀ ರವಿಶಂಕರ್ ಗುರೂಜಿ, 2010ರಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ, 2011ರಲ್ಲಿ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶ್ವರತೀರ್ಥ ಸ್ವಾಮೀಜಿ, 2012ರಲ್ಲಿ ಆಧ್ಯಾತ್ಮಿಕ ಗುರು ವಿಜಯಪುರದ ಶ್ರೀ ಸಿದ್ದೇಶ್ವರ ಸ್ವಾಮೀಜಿ, 2013ರಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ಚಂದ್ರಶೇಖರ ಕಂಬಾರ, 2014ರಲ್ಲಿ ನಾಟಕಕಾರ ಗಿರೀಶ್ ರಘುನಾಥ್ ಕಾರ್ನಾಡ್, 2015ರಲ್ಲಿ ಪ್ರಗತಿಪರ ರೈತ ಜಿಲ್ಲೆಯ ಹೆಗ್ಗಡೆಕೋಟೆ ತಾಲೂಕಿನ ಪುಟ್ಟಯ್ಯ, 2016ರಲ್ಲಿ ಕವಿ ಚೆನ್ನವೀರ ಕಣವಿ, 2017ರಲ್ಲಿ ಕೆ.ಎಸ್.ನಿಸಾರ್ ಅಹಮದ್, 2018ರಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಸುಧಾ ಮೂರ್ತಿ, 2019ರಲ್ಲಿ ಸಾಹಿತಿ ಎಸ್.ಎಲ್. ಭೈರಪ್ಪ, 2020ರಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ, ಸಂಸದ ಡಾ.ಸಿಎನ್.ಮಂಜುನಾಥ್, 2021ರಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ಎಂ.ಕೃಷ್ಣ, 2022ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, 2023ರಲ್ಲಿ ಸಂಗೀತ ನಿರ್ದೇಶಕ ಹಂಸಲೇಖ, 2024 ರಲ್ಲಿ ಹಂಪಾ ನಾಗರಾಜಯ್ಯ, 2025ರಲ್ಲಿ ಸಾಹಿತಿ ಬಾನು ಮುಷ್ತಾಕ್, ಬಿ.ಸರೋಜಾದೇವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು.ಆರ್.ಅನಂತಮೂರ್ತಿ, ಡಾ.ಗಂಗೂಬಾಯಿ ಹಾನಗಲ್, ಸಾಹಿತಿ ದೇಜಗೌ, ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್.ಜೋಯಿಸ್, ಪ್ರಗತಿಪರ ಸಾಹಿತಿ ಬರಗೂರು ರಾಮಚಂದ್ರಪ್ಪ ಸೇರಿ ಅನೇಕರು ದಸರಾ ಉದ್ಘಾಟರಾಗಿ ನಾಡಹಬ್ಬಕ್ಕೆ ತಮ್ಮದೇ ಆದ ಮೆರುಗು ಸಂದೇಶ ಸಾರಿದ್ದಾರೆ.

## ಗಣಿತ ಕಷ್ಟವಲ್ಲ, ಸವಾಲು ಎಂದು ಸ್ವೀಕರಿಸಿ: ಉಪಕುಲಪತಿ



ಚಾಮರಾಜನಗರ: ಗಣಿತವನ್ನು ಕೇವಲ ಪರೀಕ್ಷೆ, ಅಂಕ, ಸೂತ್ರ ಹಾಗೂ ಸಮೀಕರಣಗಳಿಗೆ ಸೀಮಿತಗೊಳಿಸದೆ, ಜೀವನ ಮತ್ತು ವಿಜ್ಞಾನದೊಂದಿಗೆ ಬೆಸೆದು ನೋಡುವ ಮೂಲಕ ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಸಂಶೋಧನಾ ಮನೋಭಾವ ಬೆಳೆಸಬೇಕು ಎಂದು ಚಾಮರಾಜನಗರ ಸುವರ್ಣ ಗಂಗೋತ್ರಿ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ 'ಮ್ಯಾಥ್ಸ್ ಸ್ಪಾರ್ಕ್' ಗಣಿತ ಮಾದರಿಗಳ ವಸ್ತುಪ್ರದರ್ಶನ ಹಾಗೂ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಗಣಿತವೆಂದರೆ ಕೇವಲ ಸಂಖ್ಯೆ, ಸೂತ್ರ, ಸಮೀಕರಣ ಅಥವಾ ಪರೀಕ್ಷೆಯಲ್ಲ. 'ಗಣಿತವು ಪ್ರಕೃತಿಯ ಭಾಷೆ, ವಿಜ್ಞಾನದ ಭಾಷೆ ಹಾಗೂ ತಂತ್ರಜ್ಞಾನದ ಭಾಷೆ' ಎಂದು ಅವರು ಹೇಳಿದರು. ತಾರ್ಕಿಕ ಚಿಂತನೆ ಗಣಿತದ ಪ್ರಮುಖ ಅಂಶವಾಗಿದ್ದು, ಕಟ್ಟಡಗಳ ವಿನ್ಯಾಸದಲ್ಲಿ ಜ್ಯಾಮಿತಿ, ಸಂಗೀತದಲ್ಲಿ ಮಾದರಿಗಳು, ಕಂಪ್ಯೂಟರ್ ವಿಜ್ಞಾನದಲ್ಲಿ ಅಲ್ಗಾರಿದಂ ಮತ್ತು ಲಾಜಿಕ್, ಎಂಜಿನಿಯರಿಂಗ್‌ನಲ್ಲಿ ಗಣಿತ ಮಾದರಿಗಳು, ಅರ್ಥಶಾಸ್ತ್ರ ಹಾಗೂ ಸಮಾಜ ವಿಜ್ಞಾನದಲ್ಲಿ ಸಂಖ್ಯಾಶಾಸ್ತ್ರ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಗಣಿತದ ಬಳಕೆಯಿದೆ ಎಂದರು. ಇಂದಿನ ಕೃತಕ ಬುದ್ಧಿಮತ್ತೆ, ಬಿಗ್ ಡೇಟಾ, ಡೇಟಾ ಸೈನ್ಸ್, ಸೈಬರ್ ಸುರಕ್ಷತೆ ಹಾಗೂ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರಗಳಲ್ಲೂ ಗಣಿತದ ಪಾತ್ರ ಅತ್ಯಂತ ಪ್ರಮುಖವಾಗಿದೆ. ದೈನಂದಿನ ಜೀವನದಲ್ಲಿಯೂ ಸಮಯ, ದೂರ, ಸಂಪನ್ಮೂಲ ನಿರ್ವಹಣೆ ಸೇರಿದಂತೆ ಹಲವು ಸಂದರ್ಭಗಳಲ್ಲಿ ಗಣಿತವನ್ನು ಬಳಸುತ್ತೇವೆ. ಹೀಗಾಗಿ ಗಣಿತವು ತರಗತಿಗೆ ಸೀಮಿತವಾದ ವಿಷಯವಲ್ಲ; ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಒಂದು ವಿಧಾನವಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಗಣಿತವನ್ನು 'ಕಷ್ಟ' ಎಂದು ಭಾವಿಸದೆ 'ಸವಾಲು' ಎಂದು ಸ್ವೀಕರಿಸಬೇಕು. ಸವಾಲು ಎಂಬ ಮನೋಭಾವ ಕುತೂಹಲವನ್ನು ಮೂಡಿಸುತ್ತದೆ. ಕುತೂಹಲ ಮೂಡಿದಾಗ ಕಲಿಕೆಯ ಆಸಕ್ತಿ ಹೆಚ್ಚುತ್ತದೆ ಎಂದು ಅವರು ಹೇಳಿದರು.

**ಗಣಿತದ ಜ್ಞಾನವನ್ನು ಅನ್ವಯಿಸುವತ್ತ ಗಮನ**

ಕಾರ್ಯಕ್ರಮದ ಪ್ರಾಸ್ತಾವಿಕವಾಗಿ ಜೆಎಸ್‌ಎಸ್ ಮಹಿಳಾ ಕಾಲೇಜಿನ ಗಣಿತ ವಿಭಾಗದ ಮುಖ್ಯಸ್ಥೆ ಅರುಣಶ್ರೀ ಕೆ.ಎಸ್. ಮಾತನಾಡಿ, ವಿದ್ಯಾರ್ಥಿಗಳು ಗಣಿತದ ಸೂತ್ರಗಳನ್ನು ಕೇವಲ ಕಂಠಪಾಠ ಮಾಡುವುದಕ್ಕಿಂತ ಅವುಗಳನ್ನು ಪ್ರಾಯೋಗಿಕವಾಗಿ ಹೇಗೆ ಅನ್ವಯಿಸಬಹುದು ಎಂಬುದನ್ನು ತಿಳಿದುಕೊಳ್ಳಬೇಕು ಎಂದರು. ಚಿಕ್ಕ ವಯಸ್ಸಿನಲ್ಲಿ ಪೆನ್ ಎತ್ತದೆ ಚೌಕ, ಆಯತ, ತ್ರಿಕೋನ ಸೇರಿದಂತೆ ವಿವಿಧ ಆಕೃತಿಗಳನ್ನು ಬಿಡಿಸುವ ಆಟಗಳನ್ನು ಆಡುತ್ತಿದ್ದೆವು. ಇಂತಹ ಸರಳ ಚಟುವಟಿಕೆಗಳ ಹಿಂದೆ ಗ್ರಾಫ್ ಥಿಯರಿಯಂತಹ ಗಣಿತದ ಸಿದ್ಧಾಂತಗಳಿವೆ. ಅದರ ಹಿನ್ನೆಲೆಯನ್ನು ಅರ್ಥಮಾಡಿಕೊಂಡಾಗ ವಿದ್ಯಾರ್ಥಿಗಳಲ್ಲಿ ವಿಷಯದ ಬಗ್ಗೆ ಆಸಕ್ತಿ ಮೂಡುತ್ತದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಜ್ಞಾನದ ಕಿಡಿ ಹಚ್ಚಿ, ಗಣಿತದ ಬಗ್ಗೆ ಆಸಕ್ತಿ ಬೆಳೆಸುವುದರ ಜೊತೆಗೆ ಸಂಶೋಧನಾ ಮನೋಭಾವವನ್ನು ರೂಪಿಸುವ ಉದ್ದೇಶದಿಂದ 'ಮ್ಯಾಥ್ಸ್ ಸ್ಪಾರ್ಕ್' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಜಿಲ್ಲೆಯ ಸುಮಾರು 26 ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸ್ಪರ್ಧೆಯ ಕುರಿತು ಮಾಹಿತಿ ನೀಡಲಾಗಿತ್ತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 54 ಗಣಿತ ಮಾದರಿಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸೇರಿದಂತೆ ಹಲವು ವಿಷಯಗಳನ್ನು ಮಾದರಿಗಳ ಮೂಲಕ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ಡಾ. ಬಿ.ಎಸ್. ಮಹದೇವಸ್ವಾಮಿ, ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರು, ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಪ್ರಭು, ಐಕ್ಯೂಎಸಿ ಸಂಯೋಜಕ ಡಾ. ಎ.ಎಸ್.ಬಿ.ಕೆ. ಕೆಂಡಗಣ್ಣಸ್ವಾಮಿ, ಜೆಎಸ್‌ಎಸ್ ಪಿಯು ಮಹಿಳಾ ಕಾಲೇಜಿನ ಪ್ರಾಂಶುಪಾಲ ದೇವರಾಜಮೂರ್ತಿ, ಕೆಜಿಎಫ್ ರಾಬರ್ಟ್‌ಸನ್‌ಪೇಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಪಿ.ಎಸ್. ಗುರುಪ್ರಸಾದ್ ಹಾಗೂ ಹಾಸನ ಸರ್ಕಾರಿ ವಿಜ್ಞಾನ ಕಾಲೇಜಿನ ಗಣಿತಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ. ದರ್ಶನ್ ಎ. ಸೇರಿದಂತೆ ಗಣ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪೌರಕಾರ್ಮಿಕರ ಪಾದಪೂಜೆ

## ಬಿಜೆಪಿ ಮುಖಂಡರು, ಕಾರ್ಯಕರ್ತರಿಂದ ಪ್ರಧಾನಿ ಮೋದಿ ಜನ್ಮದಿನ ಆಚರಣೆ

ರಾಮನಗರ: ಮಹಿಳಾ ಪೌರ ಕಾರ್ಮಿಕರ ಪಾದ ಪೂಜೆ ಮಾಡುವ ಮೂಲಕ ಇಲ್ಲಿನ ಬಿಜೆಪಿ ಪ್ರಮುಖರು ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬವನ್ನು ಆಚರಿಸಿದರು. ಸೇವಾ ಸಂಕಲ್ಪ ಎಂಬ ಅಭಿಯಾನವನ್ನು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಆರಂಭಿಸಿದ್ದಾರೆ.

ನಗರದ ಎಂ.ಜಿ.ರಸ್ತೆಯ ವಾಟರ್ ಟ್ಯಾಂಕ್ ಸರ್ಕಲ್ ಬಳಿಯಿರುವ ಪೌರ ಕಾರ್ಮಿಕರ ಕಚೇರಿ ಆವರಣದಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಮಹಿಳಾ ಪೌರ ಕಾರ್ಮಿಕರ ಪಾದಪೂಜೆ ಮಾಡಿ ಬಾಗಿನ ಅರ್ಪಿಸಿದರು.

**ಪೌರಕಾರ್ಮಿಕರ ಸೇವೆ ಅಮೂಲ್ಯ– ಗೌತಂ ಗೌಡ**

ಈ ವೇಳೆ ಮಾತನಾಡಿದ ಬಿಜೆಪಿ ಮುಖಂಡ ಕೆ.ಎಸ್. ಐ.ಸಿ ಮಾಜಿ ಅಧ್ಯಕ್ಷ ಗೌತಂ ಗೌಡ, ಜನರ ಆರೋಗ್ಯ ರಕ್ಷಿಸುವಲ್ಲಿ ಪೌರ ಕಾರ್ಮಿಕರ ಸೇವೆ ಅಮೂಲ್ಯವಾದುದು. ತಮ್ಮ ಕಾಯಕ ನಿಷ್ಠೆಯಿಂದ ಸ್ವಚ್ಛ ಪರಿಸರ ನಿರ್ಮಿಸುತ್ತಿರುವ ಪೌರ ಕಾರ್ಮಿಕರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಹೀಗಾಗಿ ವಿಶ್ವ ನಾಯಕ ಮೋದಿ ಅವರ ಜನ್ಮದಿನವನ್ನು ನಗರದ ಸ್ವಚ್ಛತೆಗೆ ನಿರಂತರ ಶ್ರಮಿಸುವ ಪೌರ ಕಾರ್ಮಿಕರಿಗೆ ಗೌರವಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

**13 ವರ್ಷ ಸಿಎಂ, 12 ವರ್ಷ ಪಿಎಂ**

ವಿಶ್ವನಾಯಕ, ವಿಶ್ವಗುರು, ಭಾರತವನ್ನು ಇಡೀ ವಿಶ್ವವನ್ನೇ ತಿರುಗಿ ನೋಡುವಂತೆ ಮಾಡಿರುವ ನಾಯಕ ಪ್ರಧಾನಿ ನರೇಂದ್ರಮೋದಿ ಅವರ ಜನ್ಮದಿನದ ಸಂಭ್ರಮ ದೇಶದಾದ್ಯಂತ ಮನೆ ಮಾಡಿದೆ.




ಮೋದಿ ಅವರದ್ದು ದೇಶ ಸೇವೆಯ ಸಾರ್ಥಕ ಪಯಣ. ಸತತ 13 ವರ್ಷಗಳ ಕಾಲ ಗುಜರಾತಿನ ಮುಖ್ಯಮಂತ್ರಿಯಾಗಿ, 12 ವರ್ಷಗಳಿಂದ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ನಾಯಕತ್ವದಲ್ಲಿ ಭಾರತ ತನ್ನ ಸಾಮರ್ಥ್ಯವನ್ನು ಇಡೀ ಜಗತ್ತಿಗೆ ತೋರಿಸಿದೆ ಎಂದರು.

**ಅಕ್ಟೋಬರ್ 17ರವರೆಗೆ ಸೇವಾ ಸಂಕಲ್ಪ**

ವಿಶ್ವವೇ ಭಾರತವನ್ನು ತಿರುಗಿ ನೋಡುವಂತಹ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ. ಅವರ ನಾಯಕತ್ವದ ಅಡಿಯಲ್ಲಿ ನಾವು ಕೆಲಸ ಮಾಡುತ್ತಿರುವುದೇ ನಮ್ಮ ಸೌಭಾಗ್ಯ. ಮೋದಿ ಅವರು ಮಾಡಿರುವ ಸೇವೆಯಲ್ಲಿ ನಮ್ಮದು ಅಳಿಲು ಸೇವೆಯಾಗಿದ್ದು, ದೇಶದಾದ್ಯಂತ ಬಿಜೆಪಿಯಿಂದ ಸೇವಾ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ. ನಮ್ಮ ಜಿಲ್ಲೆಯಲ್ಲೂ ಸಹ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ ನೇತೃತ್ವದಲ್ಲಿ ಸೆ.17ರಿಂದ ಅ.17ರ ವರೆಗೆ ನಿರಂತರವಾಗಿ ಅಭಿನಂದನಾ, ಆಶೀರ್ವಾದ, ಸೇವೆಯ ಸಂಕಲ್ಪದ ಮೂಲಕ ಅನೇಕ ರೀತಿಯ ಸಮಾಜಮುಖಿ ಕಾರ್ಯಗಳು ನಡೆಯಲಿವೆ ಎಂದರು.

**ಆರೋಗ್ಯ ಶಿಬಿರ, ಪರಿಕರ ವಿತರಣೆ**

ಜಿಲ್ಲೆಯಾದ್ಯಂತ ನಾವು ನಮ್ಮ ಕಾರ್ಯಕರ್ತರು, ಮುಖಂಡರ ಜೊತೆಗೂಡಿ ವಿವಿಧ ರೀತಿಯ ಸಮಾಜಮುಖಿ ಕೆಲಸ ಮಾಡಲಿದ್ದೇವೆ. ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ ಸೇರಿದಂತೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳದ್ದೇವೆ. ರಾಮನಗರ, ಹಾರೋಹಳ್ಳಿ ತಾಲ್ಲೂಕಿನಲ್ಲಿ ಅನೇಕ ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜತೆಗೆ ಆರೋಗ್ಯ ಕೇಂದ್ರಗಳಿಗೆ ಪರಿಕರಗಳ ಬೇಡಿಕೆ ಇದ್ದು, ಅದನ್ನು ಒದಗಿಸಲಾಗುತ್ತದೆ ಎಂದು ಭರವಸೆ ನೀಡಿದರು.

**ದೇಶದ ಅಭಿವೃದ್ಧಿಗಾಗಿ ಶ್ರಮ ನಿರಂತರ – ಆನಂದ ಸ್ವಾಮಿ**

ಬಿಜೆಪಿ ಜಿಲ್ಲಾಧ್ಯಕ್ಷ ಆನಂದ ಸ್ವಾಮಿ ಮಾತನಾಡಿ, ದೇಶದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿರುವ ಮೋದಿ ಅವರು ಭಾರತದ ಗೌರವವನ್ನು ವಿಶ್ವ ಮಟ್ಟದಲ್ಲಿ ಹೆಚ್ಚಿಸಿದ್ದಾರೆ. ಅವರಿಗೆ ಆಯಸ್ಸು, ಆರೋಗ್ಯ ಹಾಗೂ ಇನ್ನಷ್ಟು ಜನಸೇವೆ ಮಾಡುವ ಶಕ್ತಿ ಭಗವಂತ ನೀಡಲಿ. ನರೇಂದ್ರ ಮೋದಿ ಎಂದರೆ ಅದು ಕೇವಲ ಒಂದು ಹೆಸರಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ಮತ್ತೊಂದು ಹೆಸರೇ ನರೇಂದ್ರ ಮೋದಿ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ರಾಮನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಆರ್.ನಾಗರಾಜು, ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ಜಿಲ್ಲಾ ಉಪಾಧ್ಯಕ್ಷ ಪಿಚ್ಚನಕೆರೆ ಪಿ.ಎಸ್.ಜಗದೀಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ್, ನಾಗಮ್ಮ, ನಗರ ಅಧ್ಯಕ್ಷ ಚಂದನ್ ಮೋರೆ, ಮಹಿಳಾ ಅಧ್ಯಕ್ಷೆ ಹೇಮಾ ಶಿವರಾಂ, ಮುಖಂಡರಾದ ಆರ್.ವಿ.ಸುರೇಶ್, ರಾಜು, ಗೂಗಾರೆದೊಡ್ಡಿ ನಾಗರಾಜು, ಮಹದೇವಯ್ಯ, ದೇವಿಕಾ, ಹೇಮಲತಾ, ವರುಣ್, ಮಂಜು, ಪದ್ಮ, ಪುಟ್ಟಮ್ಮ, ಕಿಶನ್, ವಿ.ತೇಜು, ಲಕ್ಷ್ಮೀ, ಚನ್ನಪ್ಪ, ಮೋಹನ್, ಮಹೇಶ್, ಸಿದ್ದರಾಜು, ಭಾನುಪ್ರಕಾಶ್, ರಂಗಸ್ವಾಮಿ, ಹೇಮಾವತಿ ಮತ್ತಿತರರು ಇದ್ದರು.

# ವಿಶ್ವಕರ್ಮರು ವಿಶ್ವದ ಮೊದಲ ಇಂಜಿನಿಯರ್



**ಚಾಮರಾಜನಗರ** : ಭಗವಾನ್ ವಿಶ್ವಕರ್ಮರ ತತ್ವ, ಆದರ್ಶಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ ಎಂದು ಕರ್ನಾಟಕ ವಿಶ್ವಕರ್ಮ ಮಹಾಸಭಾದ ಜಿಲ್ಲಾಧ್ಯಕ್ಷ ಮಂಜುನಾಥಾಚಾರ್ ಹೇಳಿದರು.

ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಚಂದಕವಾಡಿ ಹೋಬಳಿ ಘಟಕದ ವತಿಯಿಂದ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿಶ್ವಕರ್ಮರು ಕೇವಲ ಒಬ್ಬ ದೇವಶಿಲ್ಪಿಯಲ್ಲ. ಅವರು ಕಠಿಣ ಪರಿಶ್ರಮ, ಸೃಜನಶೀಲತೆ ಮತ್ತು ನಿಷ್ಠೆ ಪ್ರತೀಕವಾಗಿದೆ. ಅವರು ವಿಶ್ವದ ಮೊದಲ ಇಂಜಿನಿಯರ್ ಎಂದರು. ಮಹಾಸಭಾದ ಸಂಸ್ಥಾಪಕ ರಾಜ್ಯಾಧ್ಯಕ್ಷರು, ಮಾಜಿ ವಿಧಾನ ಪರಿಷತ್ ಸದಸ್ಯರು, ವಿಶ್ವಕರ್ಮ ಕಣ್ಮಣಿ, ಹುಟ್ಟು ಹೋರಾಟಗಾರರು, ಸಂಘಟನಾ ಚಕ್ರವರ್ತಿ ನಮ್ಮ ನಿಮ್ಮೆಲ್ಲರ ಅಚ್ಚುಮೆಚ್ಚಿನ ಧೀಮಂತ ನಾಯಕರಾದ ಕೆ.ಪಿ ನಂಜುಂಡಿ ವಿಶ್ವಕರ್ಮರು ತಂದುಕೊಟ್ಟಂತಹ ಕೊಡುಗೆಗಳು ವಿಶ್ವಕರ್ಮ ಜಯಂತೋತ್ಸವ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣ ದಿನಾಚರಣೆ, ಋಖಿ ಮೀಸಲಾತಿ ಹೋರಾಟ ಮುಂತಾದವುಗಳು. ಸುಮಾರು 25 ವರ್ಷಗಳ ನಿರಂತರ ಹೋರಾಟವನ್ನು ಮಾಡುತ್ತಾ ರಾಜ್ಯದಲ್ಲಿರುವ ಪ್ರತಿಯೊಂದು ಹಳ್ಳಿ, ಹೋಬಳಿ, ಜಿಲ್ಲೆ, ನಗರಗಳು, ತಾಲೂಕುಗಳಲ್ಲಿರುವ ವಿಶ್ವಕರ್ಮರನ್ನು ಒಗೂಡಿಸಿ ಸಂಘಟನೆಗಳನ್ನು ಮಾಡಿ, ಪಾದಯಾತ್ರೆ, ಜನಜಾಗೃತಿ ಸಮಾವೇಶ ಮಾಡಿ ತಂದುಕೊಟ್ಟಂತಹ ಕೊಡುಗೆಗಳು ಇದಾಗಿದೆ ಎಂದರು.

ಗೌಡಿಕೆ ಶಿವನಾಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂ.ಸಿದ್ದರಾಜು ಗ್ರಾ.ಪಂ.ಮಾಜಿ ಅಧ್ಯಕ್ಷ ಸಿದ್ದಪ್ಪಾಜಿ, ಚೆಸ್ಕಾಂ ಜೆಇ ದೊರೆಸ್ವಾಮಿ, ದೀಪು, ಗ್ರಾ.ಪಂ.ಮಾಜಿ ಸದಸ್ಯ ಖಾದರ್, ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ನಾಗರಾಜು, ಮಹಾಸಭಾದ ಜಿಲ್ಲಾ ಉಪಾಧ್ಯಕ್ಷ ನಾಗೇಂದ್ರ, ತಾಲೂಕು ಯುವ ಘಟಕದ ಅಧ್ಯಕ್ಷ ವೈ.ಬಿ.ಸ್ವಾಮಿ, ನಾಗವಳ್ಳಿ ಕುಮಾರ್,ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಚಂದಕವಾಡಿ ಹೋಬಳಿ ಘಟಕದ ಪದಾಧಿಕಾರಿಗಳು,ಸರಗೂರು,ಕಾಗಲವಾಡಿ, ಚಂದಕವಾಡಿ ಗ್ರಾಮದ ವಿಶ್ವಕರ್ಮ ಸಮುದಾಯದವರು ಭಾಗವಹಿಸಿದ್ದರು.

# ಪ್ರತಾಪಸಿಂಹ ವಿರುದ್ಧ ಸ್ವಯಂ ದೂರು ದಾಖಲಿಗೆ ಆಗ್ರಹ

ಮೈಸೂರು: ಟಿ. ನರಸೀಪುರದಲ್ಲಿ ಗಣೇಶ ಮೆರವಣಿಗೆ ಸಂದರ್ಭದಲ್ಲಿ ಯುವಕರಿಗೆ ಕೋಮು ಸೌಹಾರ್ದತೆ ಮತ್ತು ಶಾಂತಿ ಕಾಪಾಡುವಂತೆ ಸಲಹೆ ನೀಡಿದ ಕರ್ತವ್ಯನಿರತ ಪೊಲೀಸ್ ಇನ್ಸ್ ಪೆಕ್ಟರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಪೊಲೀಸ್ ಠಾಣೆಗೆ ನುಗ್ಗುವುದಾಗಿ ಬೆದರಿಕೆ ಹಾಕಿರುವ ಪ್ರತಾಪ್ ಸಿಂಹ ವರ್ತನೆಯನ್ನು ಎಸ್‌ಡಿಪಿಐ ಮೈಸೂರು ಜಿಲ್ಲಾಧ್ಯಕ್ಷ ರಫತ್ ಖಾನ್ ತೀವ್ರವಾಗಿ ಖಂಡಿಸಿ ಪ್ರತಾಪಸಿಂಹ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಗೆ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪೊಲೀಸ್ ಅಧಿಕಾರಿಯೊಬ್ಬರು



ತಮ್ಮ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅವರನ್ನು ಅವಾಚ್ಯವಾಗಿ ನಿಂದಿಸುವುದು, ಬೆದರಿಕೆ ಹಾಕುವುದು ಹಾಗೂ ಪೊಲೀಸ್ ಠಾಣೆಗೆ ನುಗ್ಗುವುದಾಗಿ ಹೇಳುವುದು ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲಾಗಿದೆ. ಇಂತಹ ವರ್ತನೆಯನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲು ಸಾಧ್ಯವಿಲ್ಲ.ಸಾಮಾನ್ಯ ನಾಗರಿಕನೊಬ್ಬ ಇಂತಹ ಕೃತ್ಯ ಎಸಗಿದ್ದರೆ ತಕ್ಷಣ ಕಾನೂನು ಕ್ರಮ ಕೈಗೊಳ್ಳಲಾಗುತ್ತಿತ್ತು. ಹಾಗಾದರೆ ಪ್ರತಾಪ್ ಸಿಂಹ ಅವರಿಗೆ ಮಾತ್ರ ಕಾನೂನಿನಿಂದ ವಿನಾಯಿತಿ ಏಕೆ? ಎಂದು ಪ್ರಶ್ನಿಸಿದರು. ಮೈಸೂರು ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಕುರಿತು ಸಾರ್ವಜನಿಕರಿಗೆ ಸ್ಪಷ್ಟ ಉತ್ತರ ನೀಡಬೇಕು. ಕೋಮು ಸೌಹಾರ್ದತೆ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವಂತಹ ಹೇಳಿಕೆಗಳು ಅಥವಾ ಕೃತ್ಯಗಳ ಆರೋಪಗಳಿದ್ದರೂ ಪ್ರತಾಪ್ ಸಿಂಹ ವಿರುದ್ಧ ಪರಿಣಾಮಕಾರಿ ಕಾನೂನು ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು ಎಂಬುದನ್ನು ಪೊಲೀಸ್ ಇಲಾಖೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ಇನ್ನಿತರ ಪದಾಧಿಕಾರಿಗಳಾದ ಎಸ್. ಸ್ವಾಮಿ, ಎಂ.ಡಿ. ಸಫಿ, ಮನ್ಸೂರ್ ಖಾನ್, ಜವಾದ್ ಅಹಮದ್ ಇದ್ದರು.

# 26ನೇ ದಿನವೂ ರೈತರ ಧರಣಿ; ಆಡಳಿತದ ವಿರುದ್ಧ ಆಕ್ರೋಶ!

ಗುಂಡ್ಲುಪೇಟೆ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ನಡೆಸುತ್ತಿರುವ ಆಹೋರಾತ್ರಿ ಧರಣಿ 26ನೇ ದಿನಕ್ಕೆ ಕಾಲಿಟ್ಟರೂ, ಜಿಲ್ಲಾ ಹಾಗೂ ತಾಲೂಕು ಆಡಳಿತ ರೈತರ ಸಮಸ್ಯೆಗಳನ್ನು ಆಲಿಸದೆ ನಿರ್ಲಕ್ಷ್ಯ ವಹಿಸಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ನಡೆಯುತ್ತಿರುವ ಧರಣಿಯಲ್ಲಿ ರೈತರು ತಾಲೂಕು ಆಡಳಿತ ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದರು. ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಮಾತನಾಡಿ, ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸಬೇಕು. ದಶಕಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕುಪತ್ರ ನೀಡಬೇಕು ಹಾಗೂ ಸಾಗುವಳಿ ಎನ್‌ಒಸಿ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ಒತ್ತಾಯಿಸಿದರು.

**3 ಸಾವಿರಕ್ಕೂ ಹೆಚ್ಚು ಅರ್ಜಿ; 141ಕ್ಕೆ ಪ್ರಕ್ರಿಯೆ!**

ಸಾಗುವಳಿ ಸಂಬಂಧ 3 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದರೂ, ಕೇವಲ 141 ಅರ್ಜಿಗಳನ್ನು ಮಾತ್ರ 'ಒನ್ ಟು ಫೈವ್' ಪ್ರಕ್ರಿಯೆಗೆ ಅರಣ್ಯ ಇಲಾಖೆಗೆ ಕಳುಹಿಸಲಾಗಿದೆ. ಉಳಿದ ಅರ್ಜಿಗಳ ಸ್ಥಿತಿ ಏನು ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಬೇಕು ಎಂದು



ಆಗ್ರಹಿಸಿದರು. ತಾಲೂಕು ಆಡಳಿತ ಅರ್ಜಿಗಳನ್ನು ಅರಣ್ಯ ಇಲಾಖೆಗೆ ಕಳುಹಿಸಲಾಗಿದೆ ಎಂದು ಹೇಳುತ್ತಿದ್ದರೆ, ತಾಲ್ಲೂಕು ಕಚೇರಿಯಿಂದ ಸಮರ್ಪಕವಾಗಿ ಅರ್ಜಿಗಳು ಬಂದಿಲ್ಲ ಎಂದು ಅರಣ್ಯ ಇಲಾಖೆ ಎಸಿಎಫ್ ಹೇಳುತ್ತಿರುವುದು ರೈತರಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಎರಡೂ ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದ ರೈತರು ಕಚೇರಿಗಳಿಗೆ ಅಲೆದಾಡುವಂತಾಗಿದೆ ಎಂದರು.

**ಹಿಂದೆ ಸಾಗುವಳಿ... ಈಗ ಗೋಮಾಳ?**

1990?91ರ ಅವಧಿಯಿಂದ ರೈತರು ಸಾಗುವಳಿ ಮಾಡುತ್ತಿರುವ ಜಮೀನುಗಳ ವಿಚಾರದಲ್ಲಿ ಇದೀಗ ಅಧಿಕಾರಿಗಳಿಂದ ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿದರು. ಬೆಳವಾಡಿ ಗ್ರಾಮದ 68 ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಹಿಂದೆ ಸಾಗುವಳಿಗೆ ಅವಕಾಶ ನೀಡಿ, ಇದೀಗ ಅದೇ ಜಮೀನನ್ನು ಗೋಮಾಳ ಎಂದು ಹೇಳುತ್ತಿರುವುದು ರೈತರಿಗೆ ಮಾಡುತ್ತಿರುವ ಅನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ರೈತರ ಅರ್ಜಿಗಳನ್ನು ತಹಶೀಲ್ದಾರ್ ಸಂಪೂರ್ಣವಾಗಿ ಪರಿಶೀಲಿಸಿ ತಕ್ಷಣ ಅರಣ್ಯ ಇಲಾಖೆಗೆ ಕಳುಹಿಸಬೇಕು. ಸರ್ವೆ ನಂಬರ್‌ಗಳ ಪರಿಶೀಲನೆಗೆ ಅರಣ್ಯ ಇಲಾಖೆ ಅಧಿಕಾರಿಗಳು ತೆರಳುವ ಸಂದರ್ಭದಲ್ಲಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ರಾಜಸ್ವ ನಿರೀಕ್ಷಕರನ್ನೂ ಜೊತೆಯಲ್ಲಿ ಕಳುಹಿಸಬೇಕು ಎಂದು ಒತ್ತಾಯಿಸಿದರು. ಮುಂದಿನ ತಿಂಗಳು ತಾಲೂಕು ಕಚೇರಿಯಿಂದ ಬರುವ ಅರ್ಜಿಗಳನ್ನು ಪರಿಶೀಲಿಸಿ ವಿಲೇವಾರಿ ಮಾಡುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

**'ಕೆಲಸ ಮಾಡಲು ಆಗದಿದ್ದರೆ ರಾಜೀನಾಮೆ ನೀಡಿ'**

ತಾಲೂಕು ಆಡಳಿತದ ಕಾರ್ಯವೈಖರಿಯನ್ನು ಖಂಡಿಸಿದ ರೈತರು, ರೈತರ ಕೆಲಸ ಮಾಡಲು ಸಾಧ್ಯವಾಗದಿದ್ದರೆ ಅಧಿಕಾರಿಗಳು ರಾಜೀನಾಮೆ ನೀಡಿ ಮನೆಗೆ ಹೋಗಲಿ. ಎಂದರು. ಪ್ರತಿಭಟನೆಯಲ್ಲಿ ಪ್ರವೀಣ್, ಮಹದೇವಪ್ರಸಾದ್, ಸೋಮಶೇಖರ್, ಶಿವಕುಮಾರ್, ಚಂದ್ರು, ಸಾಗರ್, ಮನು, ಮಹದೇವಸ್ವಾಮಿ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

# 25ರಂದು ಕಾಮನ್‌ಮ್ಯಾನ್ ಬಿಡುಗಡೆ



ಮೈಸೂರು: ಸುರಭಿ ಫಿಲ್ಮ್ ಅಡಿಯಲ್ಲಿ ತಾವು ನಿರ್ಮಿಸಿರುವ ಕಾಮನ್ ಮ್ಯಾನ್ ನಾನೇ ಸಿಎಂ ಹೆಸರಿನ ಚಲನ ಚಿತ್ರ ಇದೇ ಸೆ.25 ರಂದು ರಾಜ್ಯಾದ್ಯಂತ ಬಿಡುಗಡೆ ಕಾಣಲಿದ್ದು, ಕುತೂಹಲಕಾರಿ ಕಥಾ ಎಳೆಯ ಮೂಲಕ ಸಾಗುವ ಚಿತ್ರ ಇದಾಗಿದ್ದು, ಪ್ರೇಕ್ಷಕರ ಪ್ರೋತ್ಸಾಹ ನಿರೀಕ್ಷೆಯಲ್ಲಿರುವುದಾಗಿ ನಿರ್ಮಾಪಕ ಡಾ.ಎನ್. ನರಸಿಂಹಮೂರ್ತಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಕೀಲನಾಗಿದ್ದ ನಾಯಕ ಸಮಾಜದಲ್ಲಿನ ಓರೆ ಕೋರೆ ಸರಿಪಡಿಸಲು ಮುಂದಾಗಿ, ಮುಂದೊಂದು ದಿನ ಕುತೂಹಲಕಾರಿ ರೀತಿಯಲ್ಲಿ ಸಿಎಂ ಆದ ಬಳಿಕ ಮುಂದೇನಾಗುತ್ತದೆ, ಆತನಿಗೆ ಅಡ್ಡಿಯುಂಟು ಮಾಡುವವರು ಯಾರು, ಹೇಗೆ ಅದನ್ನೆಲ್ಲ ಎದುರಿಸುತ್ತಾನೆ. ಸರ್ಕಾರದ ಆಸ್ತಿ ಸಾರ್ವಜನಿಕರದು ಎಂದಾದರೆ, ಅದು ಹೇಗೆ ಸಾರ್ವಜನಿಕ ಸ್ವತ್ತಾಗುತ್ತದೆ ಎಂಬೆಲ್ಲ ರೀತಿಯ ಸ್ವಾರಸ್ಯಕರ ಸಂಗತಿಯೊಡನೆ ಚಿತ್ರ ಸಾಗುತ್ತದೆ. ಕಥೆ ಆಯ್ಕೆ ಮಾಡಿಕೊಳ್ಳುವ ವೇಳೆ ನಿವೃತ್ತ ನ್ಯಾಯಾಧೀಶರು, ವಕೀಲರು ಮೊದಲಾದವರ ಅಭಿಪ್ರಾಯ ಪಡೆಯಲಾಗಿದೆ ಎಂದರು. ಓ ಸಾಯಿ ಪ್ರಕಾಶ್ ನಿರ್ದೇಶಿಸಿದ್ದಾರೆ. ಗೌರಿ ಶಂಕರ್ ಎಸ್‌ಆರ್.ಜಿ. ನಾಯಕರಾಗಿದ್ದು, ಸೋನಾ ಲಡ್ವ ನಾಯಕಿಯಾಗಿದ್ದಾರೆ. ಸಂಗೀತ ವಿನಯ್ ಚಂದ್ರ ಅವರದ್ದಾಗಿದೆ. ಸಾಹಸ ಥ್ರಿಲ್ಲರ್ ಮಂಜು ಹಾಗೂ ಕೌರವ ವೆಂಕಟೇಶ್ ಅವರದ್ದಾಗಿದೆ ಎಂದು ವಿವರಿಸಿದರು. ನಾಲ್ಕು ಹಾಡುಗಳಿದ್ದು, ಬೆಂಗಳೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ ಎಂದು ವಿವರಿಸಿದರು. ಗೌರಿಶಂಕರ್, ವಿನಯ್ ಚಂದ್ರ, ಶ್ರೀನಿವಾಸ್‌ಗೌಡ ಇನ್ನಿತರರು ಇದ್ದರು.

ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿ

# ಮಹಿಳೆಯಿಂದಷ್ಟೇ ಸಮಾಜದ ಅಭಿವೃದ್ಧಿ, ಬದಲಾವಣೆ ಸಾಧ್ಯ

ಮೈಸೂರು: ಸಮಾಜದ ಅಭಿವೃದ್ಧಿ, ಬದಲಾವಣೆ ಏನಾದರೂ ಆಗಬೇಕಿದ್ದರೆ ಅದು ಮಹಿಳೆಯಿಂದ ಮಾತ್ರವೇ ಸಾಧ್ಯ. ಅಂತಹ ಬದಲಾವಣೆಗಳು ಮನೆಯಿಂದಲೇ ಆಗಬೇಕಿದೆ ಎಂದು ಚಂದ್ರವನ ಆಶ್ರಮ ಹಾಗೂ ಬೇಬಿಮಠದ ಪೀಠಾಧ್ಯಕ್ಷರಾದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿ ಹೇಳಿದರು.

ತಾಲ್ಲೂಕಿನ ಕಾಮನಕೆರೆಹುಂಡಿ ವಲಯದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಪಗ್ರತಿ ಬಂಧು ಸ್ವಸಹಾಯ ಸಂಘಗಳು ಮತ್ತು ಒಕ್ಕೂಟಗಳ ಸಹಯೋಗದೊಂದಿಗೆ ಭುಗತ ಗಳ್ಳಿಯ ಸಭಾಭವನದಲ್ಲಿ ನಡೆದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಭಾಗವಹಿಸಿ ಮಾತನಾಡಿದರು. ಆಧುನಿಕತೆ ಭರಾಟೆಯಲ್ಲಿ ಮನೆಗಳು, ಮನಸ್ಸುರು ಒಡೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮನಸ್ಸುಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಇಂತಹ ಸಾಮೂಹಿಕ ಕಾರ್ಯಕ್ರಮ ನಡೆಯಬೇಕಿದೆ. ಸಮಾಜ ಸರಿಯಿಲ್ಲ ಎಂದು ದೂಷಿಸುವ ಬದಲು ಮಹಿಳೆಯರು ತಮ್ಮ ಮನೆಯಿಂದಲೇ ಉತ್ತಮ ಗೌರವ, ಸಂಸ್ಕಾರ ವನ್ನು



ಕುಟುಂಬಸ್ಥರಿಗೆ ಹೇಳಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆಂದರು. ಇಂದು ಮಹಿಳೆಯರು ಎಲ್ಲಾ ರಂಗದಲ್ಲೂ ಮುಂದಿದ್ದಾರೆ. ಅಂತಹ ಮಹಿಳೆಯರು ಕುಟುಂಬದಲ್ಲಿ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವಲ್ಲಿಯೂ ಮುಂದಾ ಗಬೇಕು. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಕುಟುಂಬಗಳು ಕಲಹಕ್ಕೆ ಕಾರಣವಾಗುತ್ತಿದ್ದು, ಕುಟುಂಬದ ಮೇಲಿನ ಗೌರವ ಕಡಿಮೆಯಾಗುತ್ತಿದೆ. ಹೀಗಾಗಿ ಮಹಿಳೆಯರು ಹೆಚ್ಚೆಚ್ಚು ಪ್ರಜ್ಞಾವಂತರಾಗಬೇಕಿದೆ ಎಂದು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ನಿರ್ದೇಶಕ ವಿಜಯಕುಮಾರ್ ನಾಗನಾಳ ಮಾತನಾಡಿ, ಸ್ವಸಹಾಯದ ಜತೆಗೆ ಧರ್ಮಸ್ಥಳ ಸಂಸ್ಥೆ ಈಗ ಪ್ರಗತಿಪರ ಕೃಷಿಕರ ಸಂಘವನ್ನು ಸಹ ಪ್ರಾರಂಭಿಸಲಾಗಿದೆ. ಧರ್ಮಸ್ಥಳ ಸಂಸ್ಥೆ ಕೇವಲ ಜನರಿಗೆ ಸಾಲ ಕೊಡುವುದಕ್ಕೆ ಅಲ್ಲ. ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗಡೆಯವರು ಯೋಜನೆ ಆರಂಭಿಸಿದ್ದು ಜನರಿಗೆ ತಿಳುವಳಿಕೆ ನೀಡಿ ಗ್ರಾಮೀಣ, ಮಧ್ಯಮ ವರ್ಗದ ಜನರು ಗಳಿಸಿದ ಹಣವನ್ನು ಉಳಿತಾಯ ಮಾಡಲು ಅರಿವು ಮೂಡಿಸಲು ಟ್ರಸ್ಟ್ ಆರಂಭಿಸಿದರು. ರಾಜ್ಯದಲ್ಲಿ 5.5 ಲಕ್ಷ ಸಂಘದ ಮೂಲಕ 55 ಲಕ್ಷ ಮಂದಿ ಸದಸ್ಯರಾಗಿದ್ದಾರೆ. ತಾಲ್ಲೂಕಿನಲ್ಲಿ 40 ಕೋಟಿ ಹಣವನ್ನು 14 ವರ್ಷದಲ್ಲಿ ಉಳಿಸಿದ್ದಿರಿ ಯಾವುದೇ ಭದ್ರತಾ ಠೇವಣಿ ಇಲ್ಲದೆ 3500 ಕೋಟಿ ಹಣಕಾಸಿನ ವ್ಯವಹಾರವನ್ನು ಬ್ಯಾಂಕಿನಲ್ಲಿ ಮಾಡಿದ್ದಾರೆ. ನಿಮ್ಮ ಕಷ್ಟಗಳಿಗೆ ಬಳಸಿದ್ದೀರಿ. ಬ್ಯಾಂಕಿನಲ್ಲೂ ನಂಬಿಕೆ, ವಿಶ್ವಾಸಕ್ಕೆಯನ್ನು ಉಳಿಸಿಕೊಂಡಿದ್ದಿರಿ ಎಂದು ಹೇಳಿದರು. ಜಿಪಂ ಮಾಜಿ ಸದಸ್ಯ ಮಾದೇಗೌಡ, ಕಾಂಗ್ರೆಸ್ ಮುಖಂಡ ಕೆ.ಎಸ್.ಸಣ್ಣಸ್ವಾಮಿ, ಹಂಚ್ಯಾ ಗ್ರಾಪಂ. ಮಾಜಿ ಅಧ್ಯಕ್ಷ ಎಚ್.ಸಿ. ಕುಮಾರಸ್ವಾಮಿ, ಸದಸ್ಯರಾದ ಬಸವರಾಜು, ಚೆನ್ನಯ್ಯ, ಹಂಚ್ಯಾ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ನಾಗೇಂದ್ರ, ಹಂಚ್ಯಾ ಕೃಷಿ ಉತ್ಪನ್ನ ಸಹಕಾರ ಸಂಘದ ಅಧ್ಯಕ್ಷ ಜೋಗಿಸಿದ್ದಯ್ಯ, ಗ್ರಾಮದ ಮುಖಂಡರಾದ ವೆಂಕಟೇಶ್, ಮಹದೇವ, ನಾಗರಾಜು, ಮಾಸ್ಟರ್ ನಂಜಪ್ಪ, ಯೋಗೇಶ್, ಬಸವರಾಜು, ಪರಮೇಶ್, ಕಾಂಗ್ರೆಸ್ ಮುಖಂಡ ನಾಗರಾಜು, ಸ್ವಾಮಿ, ರವಿಕುಮಾರ್, ಯೋಜನಾಧಿಕಾರಿ ಗಳಾದ ಶಶಿರೇಖಾ.ಪಿ, ಮೇಲ್ವಿಚಾರಕರಾದ ವಿನೋದ್, ಮಂಜುಳಾ ಇನ್ನಿತರರು ಇದ್ದರು.

# 19ರಂದು ಪ್ರಜಾಸೇವೆ ಆಂದೋಲನ ಸಭೆ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯ ಜನತೆಯ ಅಹವಾಲುಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರ ನೀಡಲು ವಿಧಾನಸಭಾ ಕ್ಷೇತ್ರದ ಶಾಸಕರುಗಳ ಅಧ್ಯಕ್ಷತೆಯಲ್ಲಿ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯನ್ನು ಸೆ. 19ರ ಶನಿವಾರ ಆಯೋಜಿಸಲಾಗಿದೆ.

ಸೆ. 19ರ ಶನಿವಾರ ಬೆಳಿಗ್ಗೆ 10.30ಕ್ಕೆ ಕನಕಪುರ ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿಯ ಆಲಹಳ್ಳಿ ಗ್ರಾಮದ ನಾಡಕಚೇರಿ ಮುಂಭಾಗದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಕನಕಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಹಾಗೂ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಹೋಬಳಿಯ ವಿರೂಪಾಕ್ಷಿಪುರ ಗ್ರಾಮ ಪಂಚಾಯಿತಿ ಸಮೀಪದ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಶಾಸಕರಾದ ಸಿ.ಪಿ. ಯೋಗೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ಅಹವಾಲುಗಳು ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳ ಸವಲತ್ತು ಪಡೆಯಲು ಅರ್ಜಿ ಸಲ್ಲಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಚನ್ನಪಟ್ಟಣ ಆಟಿಕೆಗಳಿಗೆ ಹೊಸ ಮಾರು ಕಟ್ಟೆ ಸೃಷ್ಟಿಗೆ ಮಹತ್ವಾಕಾಂಕ್ಷೆ

# ಮೊದಲ ಚಿಂತನಾ ಸಭೆ ಯಶಸ್ವಿ

### ಅಟಿಕೆ ತಯಾರಿಕೆಯಲ್ಲಿ ತಂತ್ರಜ್ಞಾನದ ಹೊಸ ಸ್ಪರ್ಶಕ್ಕೆ ಚಿಂತನೆ । "ಚನ್ನಪಟ್ಟಣ ಟಾಯ್ಸ್ 2.0" ಮೂಲಕ ಜಾಗತಿಕ ಮಾರುಕಟ್ಟೆಯತ್ತ ಹೆಜ್ಜೆ

**ರಾಮನಗರ:** ಚನ್ನಪಟ್ಟಣ ಆಟಿಕೆಗಳ ಆಧುನೀಕರಣ, ಕುಶಲಕರ್ಮಿಗಳ ಸಬಲೀಕರಣ ಮತ್ತು ಹೊಸ ಮಾರುಕಟ್ಟೆ ಸೃಷ್ಟಿಗೆ ಜಿಲ್ಲಾ ಕೇಂದ್ರ ರಾಮನಗರದ ಹೊರವಲಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೊದಲ ಮಹತ್ವದ ಸಭೆ ನಡೆಯಿತು.

ಕರ್ನಾಟಕದ ಹೆಮ್ಮೆಯ ಚನ್ನಪಟ್ಟಣ ಆಟಿಕೆಗಳ ಪರಂಪರೆಯನ್ನು ಆಧುನಿಕ ತಂತ್ರಜ್ಞಾನ, ನವೀನತೆ, ಉದ್ಯಮಶೀಲತೆ ಮತ್ತು ಜಾಗತಿಕ ಮಾರುಕಟ್ಟೆಯೊಂದಿಗೆ ಸಂಯೋಜಿಸಿ ಹೊಸ ಅವಕಾಶಗಳನ್ನು ಸೃಷ್ಟಿಸುವ ಮಹತ್ವಾಕಾಂಕ್ಷೆಯ ಉಪಕ್ರಮಕ್ಕೆ ರಾಮನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಮೊದಲ ಪಾಲುದಾರರ ಸಭೆಯೊಂದಿಗೆ ಚಾಲನೆ ದೊರೆಯಿತು.



**ಪರಂಪರೆ, ತಂತ್ರಜ್ಞಾನ, ನವೀನತೆ, ಜಾಗತೀಕರಣ**

"ಚನ್ನಪಟ್ಟಣ ಟಾಯ್ಸ್ 2.0 ಪರಂಪರೆ, ತಂತ್ರಜ್ಞಾನ, ನವೀನತೆ ಮತ್ತು ಜಾಗತೀಕರಣ" ಎಂಬ ಪರಿಕಲ್ಪನೆಯಡಿ, ಕೆ-ಟೆಕ್ ಇನ್ನೋವೇಷನ್ ಲೀಪ್ ಲ್ಯಾಬ್, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರವನ್ನು ಉತ್ಪನ್ನ ನವೀನತೆ, ಮಾದರಿ ಉತ್ಪನ್ನಗಳ ಅಭಿವೃದ್ಧಿ ಮತ್ತು ತಂತ್ರಜ್ಞಾನ ಆಧಾರಿತ ತಯಾರಿಕೆಯ ಪ್ರಮುಖ ವೇದಿಕೆಯಾಗಿ ಬಳಸಿಕೊಳ್ಳುವ ಉದ್ದೇಶ ಹೊಂದಲಾಗಿದೆ.

ಚನ್ನಪಟ್ಟಣ ಅಟಿಕೆ ತಯಾರಿಕೆಗೆ ನವೀನ ತಂತ್ರಜ್ಞಾನದ ಸ್ಪರ್ಶ ನೀಡುವ ಉಪಕ್ರಮದಲ್ಲಿ ಪ್ರಮುಖ ಪ್ರೇರಕರಾದ ರೋಟರಿಯನ್ ಜಯಚಂದ್ರ ಆರಾಧ್ಯ, ಸಿ.ಇ.ಓ, ಸಿಲಿಕಾನ್ ಮೈಕ್ರೋ ಸಿಸ್ಟಮ್ಸ್ ಇವರು ಮೂರು ದಶಕಗಳಿಗೂ ಹೆಚ್ಚಿನ ತಂತ್ರಜ್ಞಾನ ಮತ್ತು ಉತ್ಪನ್ನ ವಿನ್ಯಾಸದ ಅನುಭವ ಹೊಂದಿದ್ದಾರೆ. ಚನ್ನಪಟ್ಟಣ ಆಟಿಕೆಗಳ ಆಧುನೀಕರಣಕ್ಕೆ ಅಗತ್ಯವಿರುವ ತಂತ್ರಜ್ಞಾನವನ್ನು ಗುರುತಿಸಿ, ಈ ಯೋಜನೆಯ ಪ್ರಸ್ತಾವನೆ ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಸಿಲಿಕಾನ್ ಮೈಕ್ರೋ ಸಿಸ್ಟಮ್ಸ್ ಸಂಸ್ಥೆಯು ಶಿಕ್ಷಣ ಕ್ಷೇತ್ರಕ್ಕಾಗಿ 200ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದ್ದು, 300ಕ್ಕೂ ಹೆಚ್ಚು ತಂತ್ರಜ್ಞಾನ ಕಾರ್ಯಾಗಾರಗಳನ್ನು ನಡೆಸಿ 20,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗಕ್ಕೆ ತರಬೇತಿ ನೀಡಿದೆ.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರದ ಪ್ರಾಂಶುಪಾಲರಾದ ಡಾ. ವಸಂತ್ ಜಿ. ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಚನ್ನಪಟ್ಟಣ ಆಟಿಕೆಗಳ ಕುಶಲಕರ್ಮಿಗಳ ಸಂಘದ ಪದಾಧಿಕಾರಿಗಳು ಹಾಗೂ ಕುಶಲಕರ್ಮಿಗಳು, ವಿವಿಧ ಎಂಜಿನಿಯರಿಂಗ್ ವಿಭಾಗಗಳ ಬೋಧಕ ವರ್ಗ, ತಂತ್ರಜ್ಞಾನ ತಜ್ಞರು, ನಿರ್ವಹಣಾ ಕ್ಷೇತ್ರದ ತಜ್ಞರು, ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು. ಈ ಉಪಕ್ರಮದ ಪರಿಕಲ್ಪನೆಗೆ ಹಿಂದಿನ ಪ್ರಾಂಶುಪಾಲರು ಹಾಗೂ ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರಾಗಿರುವ ಡಾ.ಜಿ.ಪುಂಡರಿಕಾ ಅವರೂ ಪ್ರಮುಖ ಪ್ರೇರಣೆಯಾಗಿದ್ದಾರೆ. ಲೀಪ್ ಕೆ-ಟೆಕ್ ಟೆಕ್ ಲ್ಯಾಬ್ ಸಂಯೋಜಕರಾದ ಡಾ. ಜ್ಞಾನಮೂರ್ತಿ ಬಿ.ಪಿ., ಸಹಾಯಕ ಪ್ರಾಧ್ಯಾಪಕರು ಸಭೆಯಲ್ಲಿ ಭಾಗವಹಿಸಿ ಚರ್ಚೆ ನಡೆಸಿದರು.

**ಯಾವ್ಯಾವ ತಂತ್ರಜ್ಞಾನ ಅಳವಡಿಕೆ?**

ಸಾಂಪ್ರದಾಯಿಕ ಚನ್ನಪಟ್ಟಣ ಆಟಿಕೆಗಳಿಗೆ ಮೆಕ್ಯಾನಿಕ್ಸ್, ಎಲೆಕ್ಟ್ರಾನಿಕ್ಸ್, ಎಂಬೆಡೆಡ್ ಸಿಸ್ಟಮ್ಸ್, ರೋಬೋಟಿಕ್ಸ್, ಗೇಮಿಫಿಕೇಶನ್ ಮತ್ತು ಖಖಇಒ ಶಿಕ್ಷಣವನ್ನು ಸಂಯೋಜಿಸುವ ಮೂಲಕ ಹೊಸ ಪೀಳಿಗೆಯ ಗ್ರಾಹಕರನ್ನು ಆಕರ್ಷಿಸುವ ನವೀನ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ತಂತ್ರಜ್ಞಾನವು ಕುಶಲಕರ್ಮಿಗಳನ್ನು ಬದಲಿಸುವುದಲ್ಲ; ಅವರ ಕೌಶಲ್ಯಕ್ಕೆ ಹೆಚ್ಚಿನ ಮೌಲ್ಯ, ಉತ್ಪಾದಕತೆ ಮತ್ತು ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸುವುದು ಈ ಯೋಜನೆಯ ಮೂಲ ತತ್ವವಾಗಿದೆ.

ರೋಟರಿ ಅಂತರ ರಾಷ್ಟ್ರೀಯ ಜಿಲ್ಲೆ 3191, ಜಿಲ್ಲಾ ಪಾಲಕರಾದ ರೋಟರಿಯನ್ ಅನಿಲ್ ಗುಪ್ತಾ ಮತ್ತು ಜಿಲ್ಲಾ ವೃತ್ತಿ ಪರ ಸೇವೆ ನಿರ್ದೇಶಕರು ರೋಟರಿಯನ್ ಆನಂದ್ ರಾಮಚಂದ್ರ ಅವರ ಬೆಂಬಲದೊಂದಿಗೆ ಸಮುದಾಯ ಅಭಿವೃದ್ಧಿ, ಕೌಶಲ್ಯಾಭಿವೃದ್ಧಿ, ಸಂಪನ್ಮೂಲ ಕ್ರೋಢೀಕರಣ ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಪರ್ಕಗಳ ಸಾಧ್ಯತೆಗಳನ್ನು ಅನ್ವೇಷಿಸಲಾಗುತ್ತಿದೆ.

ಸುರಾನ ಕಾಲೇಜ್ ಆಫ್ ಮ್ಯಾನೇಜ್ಮೆಂಟ್, ಬೆಂಗಳೂರು ಎಮ್.ಬಿ.ಎ ವಿಭಾಗದ ಡಾ. ಅನಿತಾ ಎನ್. ಅವರು ನಿರ್ವಹಣಾ ಚರ್ಚೆಗಳಿಗೆ ನೇತೃತ್ವ ನೀಡಿದರು. ಒಃಂ ಬೋಧಕ ವರ್ಗ, ಸಂಶೋಧನಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳು ಮುಂದಿನ ಹಂತಗಳಲ್ಲಿ ಗ್ರಾಹಕರ ಅಗತ್ಯತೆ, ಮಾರುಕಟ್ಟೆ ವಿಶ್ಲೇಷಣೆ, ಬ್ರ್ಯಾಂಡಿಂಗ್, ಬೆಲೆ ನಿಗದಿ, ವ್ಯವಹಾರ ಮಾದರಿ, ಉದ್ಯಮಶೀಲತೆ ಮತ್ತು ರಫ್ತು ತಂತ್ರಗಳ ಕುರಿತು ಅಧ್ಯಯನ ನಡೆಸಲಿದ್ದಾರೆ.

**ಕುಶಲಕರ್ಮಿಗಳೇ ಹೃದಯಭಾಗ**

ಈ ಸಂಪೂರ್ಣ ಉಪಕ್ರಮದ ಹೃದಯಭಾಗವಾಗಿ ಚನ್ನಪಟ್ಟಣ ಆಟಿಕೆಗಳ ಕುಶಲಕರ್ಮಿಗಳ ಸಂಘ ಮತ್ತು ಅದರ ಸದಸ್ಯರು ಕಾರ್ಯನಿರ್ವಹಿಸಲಿದ್ದು, ಅವರ ಸಾಂಪ್ರದಾಯಿಕ ಜ್ಞಾನ ಮತ್ತು ಕೌಶಲ್ಯವನ್ನು ಆಧುನಿಕ ತಂತ್ರಜ್ಞಾನ ಹಾಗೂ ಮಾರುಕಟ್ಟೆಯೊಂದಿಗೆ ಜೋಡಿಸುವ ಮೂಲಕ ಸುಸ್ಥಿರ ಜೀವನೋಪಾಯ ಮತ್ತು ಉತ್ತಮ ವ್ಯಾಪಾರಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ.

ಮುಂದಿನ ಹಂತದಲ್ಲಿ ಯಾಂತ್ರಿಕ ಆಟಿಕೆಗಳು, ಖಖಇಒ ಶಿಕ್ಷಣ ಆಟಿಕೆಗಳು, ಎಲೆಕ್ಟ್ರಾನಿಕ್ ಮತ್ತು ಸ್ಮಾರ್ಟ್ ಆಟಿಕೆಗಳು, ಗೇಮಿಂಗ್ ಉತ್ಪನ್ನಗಳು, ರೋಬೋಟಿಕ್ಸ್ ಹಾಗೂ ತಂತ್ರಜ್ಞಾನ ಆಧಾರಿತ ಹೊಸ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುವುದು ಎಂಬುದು ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯ.

ಈ ಉಪಕ್ರಮದ ದೀರ್ಘಕಾಲೀನ ದೃಷ್ಟಿಕೋನವು ಚನ್ನಪಟ್ಟಣವನ್ನು ಪರಂಪರೆ ಆಧಾರಿತ ನವೀನತೆ, ಸೃಜನಾತ್ಮಕ ತಯಾರಿಕೆ, ಖಖಇಒ ಆಟಿಕೆಗಳು, ಕೌಶಲ್ಯಾಭಿವೃದ್ಧಿ ಮತ್ತು ಕುಶಲಕರ್ಮಿ ಉದ್ಯಮಶೀಲತೆಯ ಜಾಗತಿಕ ಕೇಂದ್ರವನ್ನಾಗಿ ರೂಪಿಸುವುದಾಗಿದೆ.

"ಕೌಶಲ್ಯ ಉಳಿಸೋಣ. ಕುಶಲಕರ್ಮಿಗಳನ್ನು ಸಬಲಗೊಳಿಸೋಣ. ಆಟಿಕೆಗಳಿಗೆ ನವೀನತೆ ನೀಡೋಣ. ಉದ್ಯಮ ಬೆಳೆಸೋಣ. ಚನ್ನಪಟ್ಟಣವನ್ನು ಜಗತ್ತಿಗೆ ಕೊಂಡೊಯ್ಯೋಣ" ಎಂದು ಸಭೆಯಲ್ಲಿ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಗಿದೆ.

## ಬಸವಾಪುರ ಸರ್ಕಾರಿ ಶಾಲೆಗೆ ಕೇರಂ ಬೋರ್ಡ್ ವಿತರಣೆ



**ಚಾಮರಾಜನಗರ:** ತಾಲ್ಲೂಕಿನ ಬಸವಾಪುರ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಉಚಿತ ಕೇರಂ ಬೋರ್ಡ್ ವಿತರಿಸಲಾಯಿತು.

ಸರಗೂರು ತಾಲ್ಲೂಕಿನ ಕಿತ್ತೂರು ರವಿರಾಮೇಶ್ವರ ಟ್ರಸ್ಟ್ ವತಿಯಿಂದ ನೀಡಲಾದ ಕೇರಂ ಬೋರ್ಡ್‌ನ್ನು ಚಾಮರಾಜನಗರ ಜಿಲ್ಲಾ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ ಅವರು ಶಾಲೆಯ ಶಿಕ್ಷಕರಿಗೆ ಹಸ್ತಾಂತರಿಸಿದರು.

ಸಿದ್ದಲಿಂಗ ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಬೆಳೆಸುವುದರ ಜೊತೆಗೆ ಮನರಂಜನೆಯ ಮೂಲಕ ಏಕಾಗ್ರತೆ ಹಾಗೂ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸಲು ಕೇರಂನಂತಹ ಒಳಾಂಗಣ ಕ್ರೀಡೆಗಳು ಸಹಕಾರಿಯಾಗಲಿವೆ ಎಂದು ತಿಳಿಸಲಾಯಿತು.

ನಂತರ ಮಾತನಾಡಿದ ಬಿಳಿಗಿರಿ ಶ್ರೀನಿವಾಸ್ ರವರು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಓದಿನ ಜೊತೆಗೆ ಒಳಾಂಗಣ ಕ್ರೀಡೆಗಳಲ್ಲಿ ಹೆಚ್ಚು ತೊಡಗಿಸಿಕೊಂಡರೆ. ಶಾಲೆಗೆ ಹಾಗೂ ಗ್ರಾಮಕ್ಕೆ ಒಳ್ಳೆಯ ಹೆಸರು ಬರುತ್ತದೆ ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಿಗೆ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಉತ್ತೇಜಿಸ ಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಸ್.ಎಂ.ನಂದೀಶ್, ಬಿಳಿಗಿರಿಶ್ರೀನಿವಾಸ್, ಚರಣ್ ಬಿಳಿಗಿರಿ ಸೇರಿದಂತೆ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

## ಸೆ.20 ರಂದು ಚಾಮರಾಜನಗರ ಜಿಲ್ಲಾ ಕುಂಬಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘದ ವಾರ್ಷಿಕ ಸಭೆ

**ಚಾಮರಾಜನಗರ:** ಚಾಮರಾಜನಗರ ಜಿಲ್ಲಾ ಕುಂಬಾರರ ಕೈಗಾರಿಕಾ ವಿವಿದೋದ್ದೇಶ ಸಹಕಾರ ಸಂಘದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸೆ. 20ರ ಭಾನುವಾರ ನಗರದಲ್ಲಿ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 11 ಗಂಟೆಗೆ ನಗರದ ದೇವಾಂಗ ಬೀದಿಯ 1ನೇ ಕ್ರಾಸ್‌ನಲ್ಲಿರುವ ನಿಂಬುಜಾದೇವಿ ದೇವಸ್ಥಾನ ದೊಡ್ಡ ಗರಡಿಯಲ್ಲಿ ಸಂಘದ ಅಧ್ಯಕ್ಷರಾದ ಟಿ.ಎಸ್. ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸರ್ವ ಸದಸ್ಯರು ಸಭೆಗೆ ತಪ್ಪದೇ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಬಿ. ಶಿವಣ್ಣ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಪೂಜೆಯಲ್ಲಿ ಭಾಗಿಯಾದ ಮುಖಂಡನಿಗೆ ಬಹಿಷ್ಕಾರ

### ಆರು ಕುಟುಂಬಗಳನ್ನು ಹೊರಗಿಟ್ಟ ಆರೋಪ; ಅಧಿಕಾರಿಗಳ ಮಧ್ಯಪ್ರವೇಶಕ್ಕೆ ಒತ್ತಾಯ



**ಗುಂಡ್ಲುಪೇಟೆ:** ಅನ್ಯ ಕೋಮಿನ ಯುವತಿಯನ್ನು ವಿವಾಹವಾದ ಯುವಕನ ಮನೆಯಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಮುದಾಯದ ಸಂಪ್ರದಾಯದಂತೆ ಯುವತಿಗೆ ವಿಭೂತಿ ಹಚ್ಚಿದ ಆರೋಪದ ಹಿನ್ನೆಲೆಯಲ್ಲಿ ಗ್ರಾಮದ ಮುಖಂಡ ಸೇರಿದಂತೆ ಆರು ಕುಟುಂಬಗಳನ್ನು ಗ್ರಾಮದೇವತೆ ಜಾತ್ರೆಯಿಂದ ಬಹಿಷ್ಕರಿಸಲಾಗಿದೆ ಎಂದು ಆರೋಪಿಸಿ, ಕೋಡಹಳ್ಳಿ ಗ್ರಾಮದ ನಿವಾಸಿಗಳು ನ್ಯಾಯಕ್ಕಾಗಿ ಅಧಿಕಾರಿಗಳ ಮೊರೆ ಹೋಗಿದ್ದಾರೆ.

ತಾಲ್ಲೂಕಿನ ಕೋಡಹಳ್ಳಿ ಗ್ರಾಮದ ಮಾಲರಸಮ್ಮ ಗ್ರಾಮದೇವತೆ ಎರಡು ವರ್ಷಕ್ಕೆ ಒಮ್ಮೆ ನಡೆಯುವ ಹಬ್ಬಕ್ಕೆ 160 ಕುಟುಂಬಗಳ ಪೈಕಿ ಆರು ಕುಟುಂಬಗಳನ್ನು ಸೇರಿಸಿಕೊಳ್ಳದೆ ಬಹಿಷ್ಕಾರ ಮಾಡಲಾಗಿದೆ ಎಂದು ಅರೋಪಿಸಿ ಬಹಿಷ್ಕಾರಕ್ಕೆ ಒಳಗಾಗಿರುವ ಕುಟುಂಬಗಳ ಸದಸ್ಯರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಪ್ರಸಾದ್, 'ನಮ್ಮ ಗ್ರಾಮದಲ್ಲಿ ಈ ಹಿಂದೆಯೂ ಅನ್ಯ ಕೋಮಿನ ಯುವಕ-ಯುವತಿಯರ ನಡುವೆ ಮೂರು ಮದುವೆಗಳು ನಡೆದಿದ್ದು, ದಂಡ ವಿಧಿಸಿ ಬಳಿಕ ಸಮುದಾಯದಲ್ಲಿ ಒಪ್ಪಿಕೊಳ್ಳಲಾಗಿತ್ತು. ಕಳೆದ ವರ್ಷ ನಡೆದ ಮತ್ತೊಂದು ಮದುವೆ ಪ್ರಕರಣದಲ್ಲಿಯೂ ಯುವಕನ ಕುಟುಂಬದಿಂದ 1.25 ಲಕ್ಷ ದಂಡ ವಸೂಲಿ ಮಾಡಲಾಗಿದೆ. ಈ ಘಟನೆ ನಡೆದು ಒಂದು ವರ್ಷ ಕಳೆದಿದೆ' ಎಂದು ಹೇಳಿದರು.

'ಎರಡು ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆ ಜಾತ್ರೆಯಲ್ಲಿ ಗ್ರಾಮಸ್ಥರೆಲ್ಲರೂ ಒಗ್ಗೂಡಿ ಭಾಗವಹಿಸುವ ಅವಕಾಶ ಕಲ್ಪಿಸಬೇಕು. ಬಹಿಷ್ಕಾರಕ್ಕೊಳಗಾದ ಆರು ಕುಟುಂಬಗಳ ಸಮಸ್ಯೆಯನ್ನು ಅಧಿಕಾರಿಗಳು ಪರಿಶೀಲಿಸಿ ನ್ಯಾಯ ಒದಗಿಸಬೇಕು' ಎಂದು ಪ್ರಸಾದ್ ಒತ್ತಾಯಿಸಿದರು.

ಹಿಂದುಳಿದ ವರ್ಗಗಳ ಇಲಾಖೆ , ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕರಣದಲ್ಲಿ ಮಧ್ಯಪ್ರವೇಶಿಸಿ, ಗ್ರಾಮದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಬಗೆಹರಿಸಿ, ಎಲ್ಲ ಕುಟುಂಬಗಳಿಗೂ ಸಮಾನವಾಗಿ ಜಾತ್ರೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

## ಅಪೌಷ್ಠಿಕತೆ, ರಕ್ತಹೀನತೆ ಸಮಸ್ಯೆ ನಿವಾರಣೆಗೆ ಸಹಕರಿಸಿ: ಜಿಲ್ಲಾಧಿಕಾರಿ ಶ್ರೀರೂಪ

**ಚಾಮರಾಜನಗರ:** ಅಪೌಷ್ಟಿಕತೆ ಮತ್ತು ರಕ್ತಹೀನತೆಯ ಸಮಸ್ಯೆ ತೊಡೆದು ಹಾಕುವ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.



ಚಾಮರಾಜನಗರದ ಹರವೆ ಗ್ರಾಮದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಪೊಷಣಾ ಮಾಸಾಚರಣೆ ಹಾಗೂ ಪ್ರಧಾನಮಂತ್ರಿ ಮಾತೃವಂದನಾ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಪೌಷ್ಟಿಕತೆ ಮತ್ತು ರಕ್ತಹೀನತೆ ತೊಡೆದು ಹಾಕಲು ಎಲ್ಲರು ಕೈಜೋಡಿಸಬೇಕಿದೆ. ಈ ಸಂಬಂಧ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳ ಪಾತ್ರ ತುಂಬಾ ಮಹತ್ವದಾಗಿದೆ ಎಂಧರು.

ಇಲಾಖೆಗಳು ಸಮನ್ವಯ ಸಾಧಿಸಿ ಅಪೌಷ್ಠಿಕತೆಯನ್ನು ಹೋಗಲಾಡಿಸುವುದಕ್ಕೆ ಕ್ರಮವಹಿಸಬೇಕು. ಹರವೆ ಗ್ರಾಮವನ್ನು ಅಪೌಷ್ಠಿಕ ಮುಕ್ತ ಗ್ರಾಮವನ್ನಾಗಿ ಮಾಡಲು ಮುಂದಾಗುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ಅವರು ಮಾತನಾಡಿ ಸ್ಥಳೀಯವಾಗಿ ದೊರೆಯುವ ಸೊಪ್ಪು ತರಕಾರಿಗಳನ್ನು ಬಳಸಿಕೊಂಡು ಉತ್ತಮ ಆಹಾರ ಸೇವಿಸಬೇಕು. ಆಹಾರ ಕ್ರಮ ಹಾಗೂ ಬಳಸುವ ಆಹಾರ ಪದಾರ್ಥಗಳು ಇಂದು ಕಲುಷಿತಗೊಳ್ಳುತ್ತಿದ್ದು, ಮನೆಗಳಲ್ಲಿ ಕೈತೋಟಗಳನ್ನು ಬೆಳೆಸಿ ಉತ್ತಮ ಆಹಾರಗಳನ್ನು ಸೇವಿಸುವ ಮೂಲಕ ಅಪೌಷ್ಟಿಕತೆಯನ್ನು ಹೋಗಲಾಡಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಸುಭದ್ರಾದೇವಿ, ಜಿಲ್ಲಾ ನಿರೂಪಣಾಧಿಕಾರಿ ಬಿ. ಮಂಜುಳಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ತಿಬ್ಬಯ್ಯ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
**ಲೋಕೋಪಯೋಗಿ ಇಲಾಖೆ**
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ವಿಶೇಷ ವಿಭಾಗ, ಮೈಸೂರು.
www:eepwdsplmys@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ:0821-2492297

**ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:03/2026-27**
**ದಿನಾಂಕ: 16.09.2026**

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ನಜ಼ರ್‌ಬಾದ್, ಮೈಸೂರು, ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ನಂ 1 ವಿಶೇಷ ಉಪವಿಭಾಗ, ಮೈಸೂರು ರವರ 02 ಸಂಖ್ಯೆ ಕಾಮಗಾರಿಗಳಿಗೆ 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ ಹಾಗೂ ಲೆಕ್ಕ ಶೀರ್ಷಿಕೆ:8443-ಠೇವಣಿ ವಂತಿಕೆ ಅಡಿಯಲ್ಲಿ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-1 ಮತ್ತು ಕೆ.ಡಬ್ಲ್ಯೂ-2 ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಕ್ರ.ಸಂ 01) ರ ಕಾಮಗಾರಿಗೆ ದಿ:16.09.2026 ರಿಂದ 30.09.2026 ರ ಸಂಜೆ 17:00ರವರೆಗೆ ಹಾಗೂ ಕ್ರ.ಸಂ 02) ರ ಕಾಮಗಾರಿಗೆ-ಅಲ್ಪಾವಧಿ ಟೆಂಡರ್ ದಿ:16.09.2026 ರಿಂದ 23.09.2026 ರ ಸಂಜೆ 17:00ರವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಕನಿಷ್ಟ ಟೆಂಡರ್‌ಗಿಟ್ಟ ಮೊತ್ತ ರೂ.8.46 ಲಕ್ಷಗಳು ಹಾಗೂ ಗರಿಷ್ಟ ಟೆಂಡರ್‌ಗಿಟ್ಟ ಮೊತ್ತ ರೂ.23.67 ಲಕ್ಷಗಳು ಮತ್ತು ಕನಿಷ್ಟ ಇ.ಎಂ.ಡಿ ರೂ.21,160/- ಹಾಗೂ ಗರಿಷ್ಟ ಇ.ಎಂ.ಡಿ ರೂ.50,000/-. ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ,ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
DIPR/DDMYS/726/KSMCA/449/2026-27

## ಮರಿಯಾಲ ಶ್ರೀ ಮುರುಘರಾಜೇಂದ್ರಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ ಜಿಲ್ಲಾ ಮಟ್ಟಕ್ಕೆ ಆಯ್ಕೆ

**ಚಾಮರಾಜನಗರ:** ಚಾಮರಾಜನಗರದ ಬಿ.ಆರ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ 2026 -27ನೇ ಸಾಲಿನ ತಾಲ್ಲೂಕು ಮಟ್ಟದ ಬಾಲಕರ ವಿಭಾಗದ ಥ್ರೋಬಾಲ್ ಪಂದ್ಯಾಟದಲ್ಲಿ ಶ್ರೀ ಮುರುಘರಾಜೇಂದ್ರ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಹಿರಿಯ ಪ್ರಾಥಮಿಕ ಶಾಲೆಗಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಥ್ರೋಬಾಲ್ ವಿಭಾಗದಲ್ಲಿ ಶಾಲೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವುದಕ್ಕೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಸತತ ಅಭ್ಯಾಸ, ಕಠಿಣ ಪರಿಶ್ರಮದಿಂದ ಜಿಲ್ಲಾ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ಜಿಲ್ಲೆಗೆ ಕೀರ್ತಿ ತರಲಿ ಎಂದು ಅಶಿಸಿದರು. ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಮುಖ್ಯ ಶಿಕ್ಷಕ ಮಂಜು .ಹೆಚ್. ಆರ್ ಹಾಗೂ ಸಹ ಶಿಕ್ಷಕರ ವೃಂದವರು ಅಭಿನಂದನೆ ಸಲ್ಲಿಸಿದ್ದಾರೆ.



ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಸ್ವಚ್ಛತಾ ಹಿ ಸೇವಾ ಆಂದೋಲನಕ್ಕೆ ಜಿ.ಪಂ ಸಿಇಓ ಮೋನಾ ರೋತ್ ಚಾಲನೆ

**ಚಾಮರಾಜನಗರ:** ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸಹಯೋಗದೊಂದಿಗೆ ಸ್ವಚ್ಛತಾ ಹಿ ಸೇವಾ 2026 ಆಂದೋಲನಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಚಾಲನೆ ನೀಡಿದರು.

ಚಾಮರಾಜನಗರ ತಾಲೂಕು ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಸ್ವಚ್ಛತಾ ಹೀ ಸೇವಾ ಆಂದೋಲನಕ್ಕೆ ಚಾಲನೆ ನೀಡಿದರು.

ಜಿಲ್ಲೆ, ತಾಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ವಚ್ಛತಾ ಕಸದ ಸ್ಥಳಗಳನ್ನು ಗುರುತಿಸಬೇಕು. ಸಫಾಯಿ ಮಿತ್ರ ಸುರಕ್ಷಾ ಶಿಬಿರಗಳ ಆಯೋಜನೆ, ಸ್ವಚ್ಛ ಹಸಿರು ಉತ್ಸವ ಆಚರಣೆ, ಶ್ರಮದಾನ, ಇನ್ನಿತರ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ವರು ಸಹಕರಿಸಬೇಕು ಎಂದು ಜಿಲ್ಲ ಆಪಂಚಾಯತ್ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇಅರಸ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಗಿರಿಧರ್, ಸಹಾಯಕ ನಿರ್ದೇಶಕರಾದ ಪ್ರಕಾಶ್ ಕುಮಾರ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಕೇರಳಕ್ಕೆ ಖನಿಜ ಸಂಪತ್ತು ಸಾಗಾಟ: ಕಡಿವಾಣಕ್ಕೆ ಆಗ್ರಹ

**ಗುಂಡ್ಲುಪೇಟೆ:** ತಾಲೂಕಿನ ವಿವಿಧೆಡೆ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ಹಾಗೂ ಕಲ್ಲು, ಎಂ.ಸ್ಯಾಂಡ್ ಸೇರಿದಂತೆ ಖನಿಜ ಸಂಪತ್ತನ್ನು ಟಿಪ್ಪರ್ ಹಾಗೂ ಕಂಟೇನರ್‌ಗಳ ಮೂಲಕ ನೆರೆಯ ಕೇರಳ ರಾಜ್ಯಕ್ಕೆ ಸಾಗಿಸುತ್ತಿರುವುದಕ್ಕೆ ಕಡಿವಾಣ ಹಾಕಬೇಕು ಎಂದು ರೈತ ಸಂಘದ ಮಾಜಿ ಅಧ್ಯಕ್ಷ ಎನ್. ಮಲ್ಲೇಶ್ ನಾಯಕ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನಲ್ಲಿ ಕಾನೂನುಬದ್ಧ ಗಣಿಗಾರಿಕೆಗೆ ಗುರುತಿಸಿರುವ ಪ್ರದೇಶಕ್ಕಿಂತ ಹೆಚ್ಚಿನ ಜಾಗದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗುತ್ತಿದೆ ಎಂಬ ಆರೋಪಗಳಿವೆ. ಇದರಿಂದ ಸರ್ಕಾರಕ್ಕೆ ರಾಜಧನ ನಷ್ಟವಾಗುವುದರ ಜೊತೆಗೆ ತಾಲೂಕಿನ ನೈಸರ್ಗಿಕ ಸಂಪತ್ತು ಅನ್ಯ ರಾಜ್ಯಕ್ಕೆ ಸಾಗಣೆಯಾಗುತ್ತಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಇದೇ ಪ್ರಮಾಣದಲ್ಲಿ ಖನಿಜ ಸಂಪತ್ತಿನ ದುರ್ಬಳಕೆ ಮುಂದುವರಿದರೆ, ಸ್ಥಳೀಯವಾಗಿ ಮನೆ ನಿರ್ಮಾಣ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಅಗತ್ಯವಿರುವ ಕಟ್ಟಡ ಕಲ್ಲು ಮತ್ತು ಎಂ.ಸ್ಯಾಂಡ್‌ಗಳ ಕೊರತೆ ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪೊಲೀಸ್, ಆರ್‌ಟಿಓ ಹಾಗೂ ತಾಲೂಕು ಆಡಳಿತ ಜಂಟಿಯಾಗಿ ಕ್ರಮ ಕೈಗೊಂಡು ಅಕ್ರಮ ಗಣಿಗಾರಿಕೆ ಮತ್ತು ಖನಿಜ ಸಾಗಾಟಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.



ಅಕ್ರಮ ಚಟುವಟಿಕೆಗಳ ವಿರುದ್ಧ ರೈತ ಹಾಗೂ ಕನ್ನಡಪರ ಸಂಘಟನೆಗಳು ಮತ್ತು ಸಾರ್ವಜನಿಕರು ಒಗ್ಗೂಡಿ ಹೋರಾಟ ನಡೆಸಬೇಕು ಎಂದು ಮನವಿ ಮಾಡಿದ ಅವರು, ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚುತ್ತಿರುವ ಕಾಡುಪ್ರಾಣಿಗಳ ಹಾವಳಿಗೂ ಶಾಶ್ವತ ಪರಿಹಾರ ಕಲ್ಪಿಸಬೇಕು. ಕಂದಕ ಹಾಗೂ ರೈಲ್ವೆ ಕಂಬಿ ಅಳವಡಿಕೆ ಸೇರಿದಂತೆ ರಕ್ಷಣಾ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

## ಸ್ವಚ್ಛತೆಯೇ ಸೇವೆ2026 ರಾಜ್ಯಮಟ್ಟದ ವಿಶೇಷ ಅಭಿಯಾನಕ್ಕೆ ಮಂಡ್ಯದಲ್ಲಿ ಚಾಲನೆ

# ಸ್ವಚ್ಛತೆ ಪ್ರತಿಯೊಬ್ಬರ ಜವಾಬ್ದಾರಿ; ನಿತ್ಯದ ಆಚರಣೆಯಾಗಲಿ




**ಶ್ರೀರಂಗಪಟ್ಟಣ:** ಸ್ವಚ್ಛತೆ ಎನ್ನುವುದು ಸರ್ಕಾರ ಅಥವಾ ಗ್ರಾಮ ಪಂಚಾಯಿತಿಯ ಜವಾಬ್ದಾರಿ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ.

ಸ್ವಚ್ಛತೆಯನ್ನು ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತಗೊಳಿಸದೆ ಪ್ರತಿದಿನದ ಜೀವನದ ಭಾಗವಾಗಿಸಬೇಕು ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಆಯುಕ್ತೆ ಫೌಜಿಯಾ ತರನ್ನುಮ್ ಬಿ ಕರೆ ನೀಡಿದರು.

ಸೆಪ್ಟೆಂಬರ್ 17ರಿಂದ ಅಕ್ಟೋಬರ್ 2ರವರೆಗೆ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿರುವ ?ಸ್ವಚ್ಛತಾ ಹಿ ಸೇವಾ?2026? ಪಾಕ್ಷಿಕ ಆಂದೋಲನಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಈ ಆಂದೋಲನವು ಕೇವಲ ಪಾಕ್ಷಿಕ ಕಾರ್ಯಕ್ರಮವಾಗದೆ, ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲೂ ನಿತ್ಯದ ಸ್ವಚ್ಛತಾ ಸಂಸ್ಕೃತಿಯಾಗಿ ರೂಪುಗೊಳ್ಳಬೇಕು ಎಂಬ ಆಶಯದೊಂದಿಗೆ ಕಾರ್ಯಕ್ರಮಕ್ಕೆ ಆಯುಕ್ತರು ಚಾಲನೆ ನೀಡಲಾಯಿತು.

ಚಾಲನೆ ನೀಡಿ ಮಾತನಾಡಿದ ಆಯುಕ್ತರು ಪ್ರತಿಯೊಂದು ಕುಟುಂಬದಲ್ಲಿಯೂ ಹಸಿ ಕಸ ಮತ್ತು ಒಣ ಕಸವನ್ನು ಮೂಲದಲ್ಲಿಯೇ ಬೇರ್ಪಡಿಸಿ, ಹಸಿ ಕಸವನ್ನು ಮನೆ ಹಂತದಲ್ಲಿಯೇ ಕಾಂಪೋಸ್ಟ್ ಮಾಡುವ ಹಾಗೂ ಒಣ ಕಸವನ್ನು ಗ್ರಾಮ ಪಂಚಾಯಿತಿಯ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ನೀಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪ್ಲಾಸ್ಟಿಕ್, ಗಾಜು, ಲೋಹ ಸೇರಿದಂತೆ ಮರುಬಳಕೆ ಮಾಡಬಹುದಾದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಅಗತ್ಯವಿದೆ ಎಂದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳು, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳು, ಮಲ ತ್ಯಾಜ್ಯ ಸಂಸ್ಕರಣ ಘಟಕದ ವ್ಯವಸ್ಥೆ ಹಾಗೂ ಮೆಟೀರಿಯಲ್ ರಿಕವರಿ ಫೆಸಿಲಿಟಿ (ಒಖಈ)ಗಳ ಮೂಲಕ ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ತ್ಯಾಜ್ಯದಿಂದ ಮರುಬಳಕೆಯ ವಸ್ತುಗಳು ಹಾಗೂ ಇತರೆ ಉಪಯುಕ್ತ ಉತ್ಪನ್ನಗಳನ್ನು ತಯಾರಿಸುವ ಸಾಧ್ಯತೆಗಳಿದ್ದು, ಇವುಗಳ ಪರಿಣಾಮಕಾರಿ ಬಳಕೆಗೆ ಒತ್ತು ನೀಡಬೇಕು ಎಂದು ತಿಳಿಸಿದರು.

ಸ್ವಚ್ಛತಾ ಕಾರ್ಮಿಕರು ಹಾಗೂ ಸ್ವಚ್ಛತಾಗಾರರ ಕಾರ್ಯವನ್ನು ಗೌರವಿಸಿ, ಅವರಿಗೆ ಸಾರ್ವಜನಿಕರು ಸಹಕಾರ ನೀಡಬೇಕು. ನಾವು ಸೃಷ್ಟಿಸುವ ತ್ಯಾಜ್ಯವನ್ನು ನಿರ್ವಹಿಸುವ ಜವಾಬ್ದಾರಿಯೂ ನಮ್ಮದೇ ಆಗಿದ್ದು, ?ಇದು ಬೇರೆಯವರ ಕೆಲಸ? ಎಂಬ ಮನೋಭಾವದಿಂದ ಹೊರಬರಬೇಕು ಎಂದು ಆಯುಕ್ತರು ತಿಳಿಸಿದರು.

ಸ್ವಚ್ಛತೆಯೊಂದಿಗೆ ವೈಯಕ್ತಿಕ ಹಾಗೂ ಸಮುದಾಯ ಆರೋಗ್ಯಕ್ಕೂ ನೇರ ಸಂಬಂಧವಿದ್ದು, ಮಕ್ಕಳ ಆರೋಗ್ಯಕರ ಬೆಳವಣಿಗೆ ಸೇರಿದಂತೆ ಸಾರ್ವಜನಿಕ ಆರೋಗ್ಯದ ಮೇಲೆ ಸ್ವಚ್ಛ ಪರಿಸರ ಮಹತ್ವದ ಪರಿಣಾಮ ಬೀರುತ್ತದೆ. ಶಾಲಾ ಮಕ್ಕಳು, ಯುವಜನರು, ಶಿಕ್ಷಕರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸ್ವಸಹಾಯ ಸಂಘಗಳ ಸದಸ್ಯರು ಸೇರಿದಂತೆ ಸಮಾಜದ ಪ್ರತಿಯೊಬ್ಬರೂ ಸ್ವಚ್ಛತಾ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಕೆ.ಆರ್. ನಂದಿನಿ ಅವರು ಸ್ವಚ್ಛತಾ ಪ್ರತಿಜ್ಞೆಯನ್ನು ಬೋಧಿಸಿದರು. ಸ್ವಚ್ಛತೆ, ತ್ಯಾಜ್ಯ ವಿಂಗಡಣೆ, ಪರಿಸರ ಸಂರಕ್ಷಣೆ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂತೆ ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮುಟ್ಟಿನ ನೈರ್ಮಲ್ಯ ನಿರ್ವಹಣೆ ಕುರಿತು ಮಹಿಳೆಯರು ಹಾಗೂ ಬಾಲಕಿಯರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಯಿತು. ಮರುಬಳಕೆ ಮಾಡಬಹುದಾದ ಮೆನ್ಸ್ಟ್ರುಯಲ್ ಕಪ್ಗಳ ಬಳಕೆ, ಮಹಿಳೆಯರ ಆರೋಗ್ಯ ಹಾಗೂ ನೈರ್ಮಲ್ಯದ ಕುರಿತು ಸ್ವಸಹಾಯ ಸಂಘಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿ ಹೆಚ್ಚಿನ ಮಹಿಳೆಯರಿಗೆ ಮಾಹಿತಿ ತಲುಪಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.

ಇದೇ ವೇಳೆ ಶಾಲಾ ವಿದ್ಯಾರ್ಥಿಗಳಾದ ಸುಹಾಸಿನಿ ಹಾಗೂ ವಿಕಾಸ ಅವರು ಸ್ವಚ್ಛತೆ, ಹಸಿ?ಒಣ ಕಸ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಹಾಗೂ ಜಲಮೂಲಗಳನ್ನು ಕಲುಷಿತಗೊಳಿಸದಿರುವ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕರು, ಖಫಖ-ಇಇ, ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, SBM ಸಮಾಲೋಚಕರು, ಸ್ವಸಹಾಯ ಸಂಘಗಳ ಮಹಿಳೆಯರು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

# ವಿಶ್ವಕರ್ಮರ ಕುಲಕಸುಬು ಜಗತ್ತಿಗೆ ಮಾದರಿ: ಶಾಸಕ ಡಿ.ರವಿಶಂಕರ್

**ಕೆ .ಆರ್. ನಗರ :** ವಿಶ್ವಕರ್ಮ ಸಮುದಾಯದವರು ಮಾಡುವ ಕುಲ ಕಸುಬು ಜಗತ್ತಿಗೆ ಮಾದರಿಯಾಗಿದ್ದು ಇಂದಿನ

ತಂತ್ರಜ್ಞಾನ ಯುಗದಲ್ಲೂ ನೀವುಗಳೂ ಮಾಡುವ

ಕೆಲಸಗಳನ್ನು ಬಳಕೆ ಮಾಡಿಕೊಳ್ಳ ಲಾಗುತ್ತದೆ ಆದ್ದರಿಂದ ತಾವುಗಳು ಮಾಡುವ ಕೆಲಸಗಳನ್ನು ಕೀಳರಿಮೆ ಎಂದು ಭಾವಿಸಬಾರದು ಶಾಸಕ ಡಿ. ರವಿಶಂಕರ್ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿಂದುಳಿದ ಸಮಾಜಗಳು ಮುಖ್ಯವಾಹಿನಿಗೆ ಬರಲು ಶಿಕ್ಷಣ ಬಹಳ ಪ್ರಮುಖ ಅಸ್ತವಾಗಿದ್ದು ಇದನ್ನು ಸಮುದಾಯ ಬಂಧುಗಳು ಅರ್ಥಮಾಡಿ

ಕೊಂಡು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸ ಬೇಕು ಇದಕ್ಕೆ ಸರ್ಕಾರದ ವತಿಯಿಂದ ಮತ್ತು ನಾನು ವೈಯುಕ್ತಿಕವಾಗಿ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ದನಿದ್ದೇನೆ ಎಂದು ಭರವಸೆ ನೀಡಿದರು

ತಹಸಿಲ್ದಾರ್ ಜಿ.ಸುರೇಂದ್ರ ಮೂರ್ತಿ ಅವರು ಮಾತನಾಡಿ, ವಿಶ್ವಕರ್ಮರನ್ನು ಸಮಾಜದ ಪ್ರಥಮ ಇಂಜಿನಿಯರ್ ಎಂದು ಹೇಳಬಹುದು. ತಂತ್ರಜ್ಞಾನ ಮುಂದುವರಿಯದೆ ಇರುವ ಸಂದರ್ಭದಲ್ಲಿ ದೇವಾನುದೇವತೆಗಳಿಗೆ ಅರಮನೆಯನ್ನು ಕಟ್ಟುವುದು, ಆಯುಧಗಳನ್ನು ತಯಾರಿಸಿಕೊಡುವುದು ಸೇರಿದಂತೆ ಅನೇಕ

ತಂತ್ರಜ್ಞಾನ ಸಂಬಂಧಿತ ಕೆಲಸಗಳನ್ನು ವಿಶ್ವಕರ್ಮರು ರೂಪಿಸಿದ್ದಾರೆ ಹಾಗೂ

ಕೃಷಿಗೆ ಬೇಕಾದ ಸಲಕರಣೆಗಳನ್ನು ತಯಾರಿಸಿ ಕೊಡುವಂತಹ ಕೆಲಸವನ್ನು ವಿಶ್ವಕರ್ಮ ಸಮಾಜದವರು ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಮಾಜದ ಮುಖಂಡರಾದ ಚಂದ್ರಶೇಖರ್, ದಿನೇಶ್, ತಾರಕುಮಾರಿ, ಸುಬ್ರಮಣ್ಯ, ಭಾಸ್ಕರ, ರಾಮಾಚಾರಿ, ಸೌಂದರ್ಯರಾಜ್ ಇವರುಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕೆ . ಎಸ್.ರೇವಣ್ಣ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡ ಮಹೇಶ್, ಇಓ ವಿ.ಪಿ.ಕುಲದೀಪ್, ಬಿಇಓ ಆರ್. ಕೃಷ್ಣಪ್ಪ, ಮುಖ್ಯಾಧಿಕಾರಿ ಜಿ.ಎಸ್.ರಮೇಶ್, ವೀರಭದ್ರಚಾರ್, ಸಿ.ಆರ್.ಲೋಕೇಶ್‌ಭರಣಿ, ಕೆ.ಬಿ.ಸುಬ್ರಮಣ್ಯ, ತಿಮ್ಮ ಶೆಟ್ಟಿ, ಸಿ.ವಿ.ಮೋಹನ್, ಸಿ.ಆರ್.ಗಣೇಶ್, ತೇಜು ಕುಮಾರ್, ಅರುಣ್, ವ್ಯಾನ್ ಸುರೇಶ್, ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್ ಸೇರಿದಂತೆ ಸಮಾಜದ ನೂರಾರು ಮಂದಿ ಹಾಜರಿದ್ದರು.



# ಕೃಷಿ ಭೂಮಿಯಲ್ಲಿ ವಾಣಿಜ್ಯ ಚಟುವಟಿಕೆಗೆ ನಿಯಮಾನುಸಾರ ಭೂ ಪರಿವರ್ತನೆ ಕಡ್ಡಾಯ : ಜಿಲ್ಲಾಧಿಕಾರಿ ಡಾ. ಕುಮಾರ




**ಮಂಡ್ಯ:** ಅನುಮತಿ ಹಾಗೂ ಅಗತ್ಯ ಕಟ್ಟಡ ಪರವಾನಗಿ ಪಡೆಯದೆ ನಿರ್ಮಿಸಿರುವ ಅನಧಿಕೃತ ಕಟ್ಟಡಗಳಲ್ಲಿ ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆ ನಡೆಸಲು ಕಾನೂನುಬದ್ಧ ಪರವಾನಗಿ ನೀಡಲು ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಸ್ಪಷ್ಟಪಡಿಸಿದರು.

ಜಿಲ್ಲೆಯ ರೈತರು ಹಾಗೂ ಹೋಂಸ್ಟೇ ಮಾಲೀಕರು/ಅರ್ಜಿದಾರರು ಆಗಸ್ಟ್ 24ರಂದು ಸಲ್ಲಿಸಿದ್ದ ಮನವಿಯ ಹಿನ್ನೆಲೆಯಲ್ಲಿ, ಪ್ರವಾಸೋದ್ಯಮ ಇಲಾಖೆಗೆ ಹೊಸದಾಗಿ ಸ್ವೀಕರಿಸಿರುವ ಹೋಂಸ್ಟೇ ಘಟಕಗಳಿಗೆ ನೋಂದಣಿ ಪ್ರಮಾಣಪತ್ರ ನೀಡುವ ಸಂಬಂಧ ನಡೆದ ಸಭೆಯಲ್ಲಿ ವಹಿಸಿ ಅವರು ಮಾತನಾಡಿದರು.

ವಾಣಿಜ್ಯ ಚಟುವಟಿಕೆ ನಡೆಸಲು ಉದ್ದೇಶಿಸುವವರು ಸಂಬಂಧಿಸಿದ ಇಲಾಖೆಯಿಂದ ಅಗತ್ಯ ಅನುಮತಿ ಹಾಗೂ ಕಟ್ಟಡ ಪರವಾನಗಿ ಪಡೆದುಕೊಳ್ಳುವುದು ಕಡ್ಡಾಯ. ನಿಯಮಗಳನ್ನು ಉಲ್ಲಂಘಿಸಿ ವಾಣಿಜ್ಯ ಚಟುವಟಿಕೆ ನಡೆಸಿದಲ್ಲಿ ಸಂಬಂಧಿಸಿದ ಕಾನೂನು ಮತ್ತು ನಿಯಮಗಳನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೃಷಿ ಭೂಮಿಯಲ್ಲಿ ವಾಣಿಜ್ಯ ಚಟುವಟಿಕೆ ನಡೆಸಲು ಭೂ ಪರಿವರ್ತನೆ ಕಡ್ಡಾಯವಾಗಿದ್ದು, ಭೂ ಬಳಕೆಗೆ ಸಂಬಂಧಿಸಿದ ಅಗತ್ಯ ಅನುಮತಿಗಳನ್ನು ಪಡೆದು, ನಿಯಮಾನುಸಾರ ಭೂ ಪರಿವರ್ತನೆ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರವೇ ವಾಣಿಜ್ಯ ಉದ್ದೇಶದ ಕಟ್ಟಡ ನಿರ್ಮಾಣ ಅಥವಾ ಇತರೆ ಚಟುವಟಿಕೆಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ನಿರ್ಮಿಸಲಾಗುವ ಕಟ್ಟಡಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು ಕಾನೂನುಬಾಹಿರವಾಗಿದೆ. ಕೃಷಿ ಚಟುವಟಿಕೆಗೆ ಪೂರಕವಾಗಿ ನಿಯಮಾನುಸಾರ ನಿರ್ಮಿಸುವ ಫಾರ್ಮ್‌ಹೌಸ್‌ಗೆ ನಿಗದಿತ ನಿಯಮಗಳಡಿ ಅವಕಾಶವಿದ್ದರೂ, ಕೃಷಿ ಚಟುವಟಿಕೆಯ ಹೆಸರಿನಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸುವುದು ಅಥವಾ ನಿವೇಶನ ಅಭಿವೃದ್ಧಿಪಡಿಸುವುದನ್ನು ಅನುಮತಿಸಲಾಗುವುದಿಲ್ಲ ಎಂದರು.

ಫಾರ್ಮ್‌ಹೌಸ್‌ಗಳನ್ನು ಕೃಷಿ ಚಟುವಟಿಕೆಗೆ ಪೂರಕವಾದ ನಿವಾಸ ಅಥವಾ ಕೃಷಿ ಕಾರ್ಯಗಳಿಗೆ ಅಗತ್ಯವಿರುವ ಕಟ್ಟಡವಾಗಿ ಮಾತ್ರ ಬಳಸಬೇಕು. ಅವುಗಳನ್ನು ವಾಣಿಜ್ಯ ಚಟುವಟಿಕೆ, ನಿವೇಶನ ಅಭಿವೃದ್ಧಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಬಳಸಬಾರದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಅನಧಿಕೃತ ಕಟ್ಟಡ ನಿರ್ಮಾಣ ಹಾಗೂ ಕೃಷಿ ಭೂಮಿಯ ನಿಯಮಬಾಹಿರ ಬಳಕೆಗೆ ಅವಕಾಶ ನೀಡದಂತೆ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ನಿಯಮ ಉಲ್ಲಂಘನೆಗಳು ಕಂಡುಬಂದಲ್ಲಿ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮೀ, ಮಂಡ್ಯ ಉಪ ವಿಭಾಗಾಧಿಕಾರಿ ಶಿವಮೂರ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಚಂದ್ರಶೇಖರ್, ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ಸೇರಿದಂತೆ ಹೋಂಸ್ಟೇ ಮಾಲೀಕರು, ಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಾಕೀರ್ ಹುಸೇನ್ ನಗರದಲ್ಲಿ ಬಾಯ್ತೆರೆದು ನಿಂತ ಮ್ಯಾನ್‌ಹೋಲ್

### ಆರು ತಿಂಗಳಿಂದ ದುರಸ್ತಿಯಾಗದ ಯುಜಿಡಿ ಅವ್ಯವಸ್ಥೆ। ಮಕ್ಕಳ ಜೀವದ ಜೊತೆ ಚೆಲ್ಲಾಟವೇ?



**ಗುಂಡ್ಲುಪೇಟೆ:** ಪಟ್ಟಣದ ಜಾಕೀರ್ ಹುಸೇನ್ ನಗರದಲ್ಲಿ ಯುಜಿಡಿ ಮ್ಯಾನ್‌ಹೋಲ್‌ವೊಂದು ಕಳೆದ ಆರು ತಿಂಗಳಿಂದ ಬಾಯ್ತೆರೆದು ನಿಂತಿದ್ದು, ಬಡಾವಣೆ ನಿವಾಸಿಗಳು ಹಾಗೂ ಸಾರ್ವಜನಿಕರಿಗೆ ಅಪಾಯದ ಪರಿಸ್ಥಿತಿ ನಿರ್ಮಾಣವಾಗಿದೆ.

ಮ್ಯಾನ್‌ಹೋಲ್ ಕುಸಿದು ಹಲವು ತಿಂಗಳು ಕಳೆದರೂ ದುರಸ್ತಿ ಕಾರ್ಯ ಕೈಗೊಳ್ಳದಿರುವುದರಿಂದ ಪ್ರತಿನಿತ್ಯ ಈ ಮಾರ್ಗದಲ್ಲಿ ಸಂಚರಿಸುವ ಮಕ್ಕಳು, ವೃದ್ಧರು ಹಾಗೂ ವಾಹನ ಸವಾರರು ಆತಂಕದಲ್ಲೇ ಓಡಾಡುವಂತಾಗಿದೆ. ರಾತ್ರಿ ಸಮಯದಲ್ಲಿ ಮ್ಯಾನ್‌ಹೋಲ್ ಕಾಣದೆ ಯಾರಾದರೂ ಬಿದ್ದು ಅಪಾಯ ಸಂಭವಿಸಿದರೆ ಹೊಣೆ ಯಾರು ಎಂಬ ಪ್ರಶ್ನೆಯನ್ನು ನಿವಾಸಿಗಳು ಮುಂದಿಟ್ಟಿದ್ದಾರೆ

ಈಗಾಗಲೇ ಬಡಾವಣೆಯ ಜನರು ಸಮಸ್ಯೆ ಕುರಿತು ಗಮನ ಸೆಳೆದಿದ್ದರೂ, ಇದುವರೆಗೂ ಶಾಶ್ವತ ಪರಿಹಾರ ದೊರೆತಿಲ್ಲ ಎಂಬುದು ನಿವಾಸಿಗಳ ಆರೋಪವಾಗಿದೆ. ಅಪಾಯ ಸಂಭವಿಸಿದ ನಂತರ ಎಚ್ಚೆತ್ತುಕೊಳ್ಳುವ ಬದಲು, ಮುನ್ನೆಚ್ಚರಿಕೆಯಾಗಿ ಮ್ಯಾನ್‌ಹೋಲ್‌ನ್ನು ತಕ್ಷಣ ದುರಸ್ತಿ ಮಾಡಬೇಕು ಎಂದು ನಿವಾಸಿ ನಿಜಾಮುದ್ದೀನ್ ಒತ್ತಾಯಿಸಿದ್ದಾರೆ.

ಮಕ್ಕಳು ಪ್ರತಿನಿತ್ಯ ಓಡಾಡುವ ಪ್ರದೇಶದಲ್ಲೇ ಈ ರೀತಿಯ ಅಪಾಯಕಾರಿ ಸ್ಥಿತಿ ಮುಂದುವರಿದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಪುರಸಭೆ ಅಧಿಕಾರಿಗಳು ಇನ್ನಾದರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮ್ಯಾನ್‌ಹೋಲ್ ದುರಸ್ತಿ ಮಾಡಿ ಸಾರ್ವಜನಿಕರ ಸುರಕ್ಷತೆ ಖಚಿತಪಡಿಸಬೇಕೆಂಬುದು ಬಡಾವಣೆ ನಿವಾಸಿಗಳ ಆಗ್ರಹವಾಗಿದೆ.

# ಹನೂರು: ಭಾರಿ ಮಳೆಯ ನೀರಿನಲ್ಲಿ ಕೊಚ್ಚಿ ಹೋಗಿ ವ್ಯಕ್ತಿ ಸಾವು



**ಹನೂರು:** ಬುಧವಾರ ತಡರಾತ್ರಿ ಸುರಿದ ಭಾರಿ ಮಳೆಯ ನೀರಿನಲ್ಲಿ ಕೊಚ್ಚಿ ಹೋಗಿ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಹನೂರಿನಲ್ಲಿ ನಡೆದಿದೆ.

ಹನೂರು ಪಟ್ಟಣದ ನಿವಾಸಿ ಮಾದಯ್ಯ ಅವರ ಮಗ ರಾಜಣ್ಣ (63) ಮೃತಪಟ್ಟ ದುರ್ದೈವಿ.

**ಘಟನೆ ವಿವರ:** ಹನೂರು ಪಟ್ಟಣದ ನಿವಾಸಿ ರಾಜಣ್ಣ ಅವರು ಕಾರ್ಯನಿಮಿತ್ತ ಮಂಗಲ ಗ್ರಾಮಕ್ಕೆ ಹೋಗಿ ವಾಪಸ್ ಬರುವಾಗ ರಾತ್ರಿಯಾಗಿದ್ದರಿಂದ ಬಸ್ ಇಲ್ಲದ ಕಾರಣ ನಡೆದುಕೊಂಡು ಬರುತ್ತಿದ್ದರು. ಈ ವೇಳೆ ಮೂತ್ರ ವಿಸರ್ಜನೆಗೆ ತೆರಳಿದ್ದಾಗ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ಯಥೇಚ್ಛವಾಗಿ ನೀರು ಹರಿಯುತ್ತಿದ್ದರಿಂದ ಆಕಸ್ಮಿಕವಾಗಿ ನೀರಿನಲ್ಲಿ ಸಿಲುಕಿಕೊಂಡಿದ್ದಾರೆ. ನೀರಿನ ರಭಸಕ್ಕೆ ಸಿಲುಕಿ ಪೊಲೀಸ್ ವಸತಿಗೃಹದ ಸಮೀಪದ ತೋಟದ ಜಮೀನಿಗೆ ತೆರಳಲು ಅಡ್ಡಲಾಗಿ ಹಾಕಿದ್ದ ಪೈಪ್ ಬಳಿಯ ಸಿಲುಕಿಕೊಂಡು ಮೃತಪಟ್ಟಿದ್ದಾರೆ.

ಆದರೆ ಇದು ಯಾರ ಗಮನಕ್ಕೂ ಬಂದಿರಲಿಲ್ಲ. ಜಮೀನಿಗೆ ಹೋಗುತ್ತಿದ್ದ ರೈತರೊಬ್ಬರು ಶವವನ್ನು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ನಂತರ ಮೃತ ವ್ಯಕ್ತಿ ಯಾರೆಂದು ಗುರುತಿಸಲಾಗಿದೆ. ಮೃತದೇಹವನ್ನು ಹನೂರು ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದ ಶವಾಗಾರದಲ್ಲಿ ಇಡಲಾಗಿದೆ.

ಈ ಸಂಬಂಧ ಹನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಾಜ್ಯದ ಡೇರಿಗಳ ಅಭಿವೃದ್ಧಿಗೆ ದೇವೇಗೌಡ, ರೇವಣ್ಣ ಕೊಡುಗೆ ಅಪಾರ



**ಕೆ .ಆರ್. ನಗರ:** ಮಾಜಿ ಪ್ರಧಾನ ಮಂತ್ರಿ ಎಚ್ ಡಿ ದೇವೇಗೌಡರು ಮತ್ತು ಮಾಜಿ ಸಚಿವರಾದ ಎಚ್ ಡಿ ರೇವಣ್ಣ ನವರೇ ರಾಜ್ಯದ ಡೈರಿಗಳ ಅಭಿವೃದ್ಧಿಗೆ ಕಾರಣ ಎಂದು ಮೈಮುಲ್ ಮಾಜಿ ನಿರ್ದೇಶಕ ಎ ಟಿ ಸೋಮಶೇಖರ್ ತಿಳಿಸಿದರು ತಾಲೂಕಿನ ಮುಂಜನಹಳ್ಳಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ಸರೋಜಕುಮಾರ್ ಅಧ್ಯಕ್ಷತೆಯಲ್ಲಿ ನಡೆದ 2025 – 26ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ದೇಶಿಸಿ ಮಾತನಾಡಿದರು.

ತಾಲೂಕಿನಲ್ಲಿ ಇರುವ ಎಲ್ಲ ಗ್ರಾಮಗಳಲ್ಲೂ ಬಹುತೇಕ ಡೈರಿಗಳು ಪ್ರಾರಂಭವಾಗಿವೆ ಅದೇ ರೀತಿ ಮುಂಜನಹಳ್ಳಿ ಗ್ರಾಮದಲ್ಲೂ ಮಹಿಳಾ ಹಾಲು ಉತ್ಪಾದಕರ ಸಹಕಾರ ಯಶಸ್ವಿಯತ್ತ ಸಾಗುತ್ತಿದೆ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ಡೈರಿ ನಡೆಸುತ್ತಿರುವುದು ಬಹಳ ಬೇಸರದ ವಿಚಾರ. ಜೊತೆಗೆ ಗ್ರಾಮದ ಸಹಕಾರವು ಮುಖ್ಯ. ಹಾಗಾಗಿ ಈಗ ಎಂ. ಟಿ .ಕುಮಾರ್ ಅವರ ನೇತೃತ್ವದಲ್ಲಿ ಗ್ರಾಮದ ಎಲ್ಲಾ ಮುಖಂಡರು ಸಹಕರಿಸಿ ಡೈರಿ ಜಾಗ ಗುರುತಿಸಿದ್ದಾರೆ. ಅತಿ ಶೀಘ್ರದಲ್ಲೇ ಸ್ವಂತ ಕಟ್ಟಡ ಕಟ್ಟಲು ಮೈಸೂರು ಒಕ್ಕೂಟದಿಂದ ಅನುದಾನ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಮಂಜನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಬೆಳ್ಳಿಗ್ಗೆ ಸಂಜೆ ದಿನಕ್ಕೆ 2.200 ಲೀಟರ್ ಹಾಲನ್ನು ಖರೀದಿ ಮಾಡುತ್ತಿದೆ ಹಾಗಾಗಿ ಅಭಿವೃದ್ಧಿಯತ್ತ ಸಾಗುತ್ತಿದ್ದು ಇದಕ್ಕೆ ಸ್ವಂತ ಕಟ್ಟಡ ಬೇಕಾಗಿದೆ. 2025 – 26ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಬೋನಸ್ 2,50,36 ರೂ ಬಂದಿದೆ ಜೊತೆಗೆ ಎರಡು ಕೋಟಿ ಗೂ ಹೆಚ್ಚು ವಹಿವಾಟು ನಡೆದಿದಿದ್ದು 5 ಲಕ್ಷಕ್ಕೂ ಹೆಚ್ಚು ಲಾಭಾಂಶ ಕಂಡಿದೆ. ಇಷ್ಟೆಲ್ಲ ಅಭಿವೃದ್ಧಿಯತ್ತ ಸಂಘ ಸಾಗುತ್ತಿದ್ದರು ಬೇಸರದ ವಿಷಯ ಎಂದರೆ ನಾಲ್ಕು ವರ್ಷದಿಂದ ಆಡಳಿತ ಮಂಡಳಿ ಇಲ್ಲದೆ ಆಡಳಿತ ಅಧಿಕಾರಿ ನೇಮಕ ಮಾಡಿಕೊಂಡಿರುವುದು. ಸಂಘದ ಲಾಭ ಅಂಶಕ್ಕೆ ತೊಂದರೆ ಆದಂತಾಗಿದೆ. ಹಾಗಾಗಿ ಆಡಳಿತ ಮಂಡಳಿ ಇದ್ದರೆ ಮಾತ್ರ ಸಂಘ ಇನ್ನೂ ಹೆಚ್ಚು ಲಾಬಾಂಶ ಕಾಣಲು ಸಾಧ್ಯ ಎಂದರು.

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಎಂ .ಟಿ .ಕುಮಾರ್ ಮಾತನಾಡಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಯಾವುದೇ ಜಾತಿ ಪಕ್ಷಗಳಿಲ್ಲ ಇದು ಮಹಿಳೆಯರ ಸಬಲೀಕರಣಕ್ಕೆ ಸರ್ಕಾರಗಳು ಹೆಚ್ಚು ಒತ್ತು ನೀಡುತ್ತಿರುವುದು ಇದನ್ನ ಮಹಿಳೆಯರು ಮಾತ್ರ ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಜೊತೆಗೆ ಪುರುಷರು ಮನೆಯಲ್ಲಿ ನಿಮ್ಮ ನಿರ್ದೇಶಕರಿಗೆ ಮತ್ತು ಸೇರುದಾರರಿಗೆ ಸಹಕಾರ ಮತ್ತು ಕಿವಿಮಾತುಗಳನ್ನ ಹೇಳಬೇಕು ಅಷ್ಟೇ ನಾವ್ಯಾರು ಕೂಡ ಸಂಘದ ಒಳಗೆ ಪ್ರವೇಶಿಸಬಾರದು ಆಗ ಮಾತ್ರ ಮಹಿಳಾ ಡೈರಿಗಳು ಯಶಸ್ವಿ ಕಾಣಲು ಸಾಧ್ಯವಾಗುತ್ತದೆ ಎಂದರು.

ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾದ ಸಂದರ್ಭದಲ್ಲಿ ಈ ಡೈರಿ ತರಲು ಸಾಕಷ್ಟು ಶ್ರಮ ಪಟ್ಟಿದೆ ಜೊತೆಗೆ ಸ್ವಂತ ಕಟ್ಟಡ ಮಾಡಬೇಕು ಎಂದು ಶ್ರಮ ಪಟ್ಟರು ಡೈರಿ ಪ್ರಾರಂಭವಾಗಿದೆ ಅಷ್ಟೇ ಕಟ್ಟಡ ಇಂದಿನವರೆಗೂ ಆಗಿಲ್ಲ ದಯಮಾಡಿ ಗ್ರಾಮದ ಎಲ್ಲಾ ಸಮಾಜದ ಮುಖಂಡರಲ್ಲಿ ಮನವಿ ಮಾಡುತ್ತೇನೆ ನಿಮ್ಮೆಲ್ಲರ ಸಹಕಾರ ಇರಲಿ ಎರಡು ಮೂರು ತಿಂಗಳಲ್ಲೇ ನಿವೇಶನ ಡೈರಿಯ ಹೆಸರಿಗೆ ಮಾಡಿಸಿ ಮುಂದಿನ ವಾರ್ಷಿಕ ಸಭೆಯನ್ನು ಸ್ವಂತ ಕಟ್ಟಡದಲ್ಲೇ ಮಾಡುವಂತೆ ಎಲ್ಲರೂ ಸಹಕಾರ ನೀಡೋಣ ಎಂದರು.

ದಯಮಾಡಿ ಈ ಮಹಿಳಾ ಸಹಕಾರ ಸಂಘಕ್ಕೆ ಕಟ್ಟಡಕ್ಕೆ ಅನುದಾನ ಕೊಡುವುದರ ಜೊತೆಗೆ ಬಿಎಂಸಿ ಕೇಂದ್ರವನ್ನ ಮಾಡಿಕೊಡಬೇಕು ಇದರ ಹೆಚ್ಚಿನ ಜವಾಬ್ದಾರಿಯನ್ನು ಮಾಜಿ ನಿರ್ದೇಶಕರಾದ ಎ. ಟಿ .ಸೋಮಶೇಖರ್ ತೆಗೆದುಕೊಳ್ಳಬೇಕು ಮುಂದಿನ ಚುನಾವಣೆಯಲ್ಲಿ ನೀವೇ ಗೆಲ್ಲುತ್ತೀರಿ ನಿಮ್ಮೊಂದಿಗೆ ನಾವೆಲ್ಲರೂ ಇರುತ್ತೇವೆ ಆದರೆ ಈ ಡೈರಿ ಅಭಿವೃದ್ಧಿ ನಿಮ್ಮ ಜವಾಬ್ದಾರಿ ಆಗಿರಲಿ ಎಂದ ಅವರು ಈ ಡೈರಿ ಸ್ಥಾಪನೆ ಮಾಡಲು ಪುಟ್ಟರಾಮೇಗೌಡರು ಸಾಕಷ್ಟು ಶ್ರಮ ಪಟ್ಟಿದ್ದರು ಸ್ವಂತ ಹಣದಲ್ಲಿ ಡೈರಿ ಶೇರು ಕಟ್ಟಿದ್ದರು ನಂತರ ವಾಪಸ್ ಪಡೆದರು. ಹಾಗಾಗಿ ಅವರ ಪತ್ನಿ ವೇದಾವತಿ ಅವರು ಕಾರ್ಯದರ್ಶಿಯಾಗಿ ಸಂಘವನ್ನು ಯಶಸ್ವಿಯತ್ತ ಸಾಗಿಸುತ್ತಿದ್ದಾರೆ ಅವರ ಹೆಸರು ಚಿರಕಾಲ ಉಳಿಯಲಿ ಎಂದು ತಾತ್ಕಾಲಿಕವಾಗಿ ಸಂಕುಸ್ಥಾಪನೆ ಮಾಡಿಸುವುದು ಸೂಕ್ತ ಎಂದು ಅನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

**ವರಲಕ್ಷ್ಮಿ ಮೇಲೆ ಗರಂ;** ಸರ್ಕಾರದಿಂದ ಬರುವ ಡೈರಿ ಸೌಲಭ್ಯಗಳನ್ನು ಹಾಲು ಉತ್ಪಾದಕರಿಗೆ ಮಾಹಿತಿ ನೀಡುವಲ್ಲಿ ಸೂಪರ್ವೈಸರ್ ವರಲಕ್ಷ್ಮಿ ವಿಫಲರಾಗಿದ್ದಾರೆ. ವರ್ಷದಿಂದ ಆಗಿರುವ ಖರ್ಚು ವೆಚ್ಚಗಳನ್ನು ಸರಿಯಾದ ರೀತಿಯಲ್ಲಿ ಮಾಹಿತಿ ನೀಡುತ್ತಿಲ್ಲ ಕೇಳಿದರೆ ಹಾಲು ಉತ್ಪಾದಕರೊಂದಿಗೆ ಸರಿಯಾಗಿ ಸ್ಪಂದಿಸುವುದಿಲ್ಲ ಎಂದು ಹಾಲು ಉತ್ಪಾದಕ ಗೋಪಾಲ್ ಮತ್ತು ಇತರ ರೈತರು ಸೂಪರ್ವೈಸರ್ ವರಲಕ್ಷ್ಮಿ ಮೇಲೆ ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರತಿ ತಿಂಗಳ ಲೆಕ್ಕಾಚಾರ ಆಗಿರುವ 4 ವರ್ಷದ ಲಿಸ್ಟ್ ಕೊಡಿ ಎಂದು ಪಟ್ಟು ಹಿಡಿದರು. ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರಚಾರ ಮಾಡದೆ ಇರುವುದು ರೈತ ಹಾಲು ಉತ್ಪಾದಕರಿಗೆ ಸರ್ಕಾರಿ ಸೌಲಭ್ಯಗಳು ಸಿಗುತ್ತಿಲ್ಲ ಎಂದರು. ಡೈರಿ ಕಡೆಯಿಂದ ಹಾಲು ಉತ್ಪಾದಕರಿಗೆ ಸಿಗುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಮಾಡದಿರುವುದು ಸಾಕಷ್ಟು ಸೌಲಭ್ಯದಿಂದ ಉತ್ಪಾದಕರು ವಂಚಿತರಾಗಿದ್ದಾರೆ ಹಾಗಾಗಿ ಸೂಪರ್ವೈಸರ್ ವರಲಕ್ಷ್ಮಿ ಅವರ ಮೇಲೆ ಮೇಲಧಿಕಾರಿಗಳು ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಲಕ್ಷ್ಮಿನಾಗರಾಜ್. ನಿರ್ದೇಶಕರಾದ ವಿಜಯಮ್ಮ ಶ್ರೀನಿವಾಸ್, ಶಾರದಾ ವೆಂಕಟೇಶ್,ಕಾಂತಮಣಿಸುರೇಶ್, ಚಂದ್ರಮ್ಮಮಂಜುನಾಥ್,ಭಾಗ್ಯ ದಯಾನಂದಸಾಗರ್,ಜಯಮ್ಮರಾಜೇಗೌಡ,ಜಮುನಾಸ್ವಾಮಿಗೌಡ. ಸವಿತಾಸುರೇಶ್, ಕಾರ್ಯದರ್ಶಿ ವೇದಾವತಿ. ಹಾಲು ಪರಿವೀಕ್ಷಕಿ ಮಂಜುಳಾ. ಸೇರಿದಂತೆ ಎಲ್ಲಾ ಷೇರುದಾರರು ಮತ್ತು ಗ್ರಾಮದ ಮುಖಂಡರು ಇದ್ದರು.

# ಗ್ರಂಥಾಲಯಗಳು ಜ್ಞಾನದ ಶಕ್ತಿ ಕೇಂದ್ರಗಳು: ಬಿ. ಪ್ರಕಾಶ್

**ಮೈಸೂರು:** ಗ್ರಂಥಾಲಯಗಳು ಜ್ಞಾನದ ಶಕ್ತಿ ಕೇಂದ್ರಗಳಾಗಿದ್ದು, ಅಭ್ಯರ್ಥಿಗಳು ತಾಳ್ಮೆ, ಶಿಸ್ತು ಮತ್ತು ಪರಿಶ್ರಮದಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಯಶಸ್ಸು ಗಳಿಸಬೇಕೆಂದು ಕೆ.ಎಸ್. ಆರ್.ಪಿ 5ನೇ ಪಡೆಯ ಸಹಾಯಕ ಕಮಾಂಡೆಂಟ್ ಬಿ. ಪ್ರಕಾಶ್ ಅವರು ಹೇಳಿದರು.

ಇಂದು ನಗರ ಕೇಂದ್ರ ಗ್ರಂಥಾಲಯ ಹಾಗೂ ಬೆಂಗಳೂರಿನ ಜ್ಞಾನ ಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 20 ರಂದು ನಡೆಯಲಿರುವ ಕೆ.ಎಸ್.ಆರ್.ಪಿ ಕಾನ್‌ಸ್ಟೇಬಲ್ ಲಿಖಿತ ಪರೀಕ್ಷೆಗಾಗಿ 50ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಅಣುಕು ಪರೀಕ್ಷೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

15 ವರ್ಷಗಳ ಹಿಂದೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರ ಕೇಂದ್ರ ಗ್ರಂಥಾಲಯಕ್ಕೆ ಪ್ರತಿನಿತ್ಯ ಭೇಟಿ ನೀಡಿ ಅದರ ಸಂಪೂರ್ಣ ಉಪಯೋಗವನ್ನು ಪಡೆದ ರೀತಿಯನ್ನು ವಿಸ್ತಾರವಾಗಿ ವಿವರಿಸಿದರು. ಪ್ರತಿಯೊಬ್ಬ ಉದ್ಯೋಗಾಂಕ್ಷಿಯು ಅದೇ ರೀತಿ ಗ್ರಂಥಾಲಯಗಳನ್ನು ಸದುಪಯೋಗ ಬಳಸಿಕೊಳ್ಳಬೇಕೆಂದು, ಪರೀಕ್ಷೆಯನ್ನು ಎದುರಿಸಿದಲ್ಲಿ ಯಶಸ್ಸು ಪಡೆಯುವುದು ನಿಶ್ಚಿತ ಎಂದು ಹೇಳಿದರು.ಯಾರೇ ಉದ್ಯೋಗಾಕಾಂಕ್ಷಿ ಯಾವುದೇ ಒಂದು ಪರೀಕ್ಷೆಯನ್ನು ಗುರಿಯಾಗಿ ಇಟ್ಟುಕೊಂಡು ತಯಾರಿ ಮಾಡಿಕೊಳ್ಳುವುದರ ಬದಲು ವಿವಿಧ ಪರೀಕ್ಷೆಗಳನ್ನು ಎದುರಿಸುವ ಅಭ್ಯಾಸವನ್ನು ಬೆಳಸಿಕೊಳ್ಳತ್ತಾ, ಪರೀಕ್ಷೆಗೆ ತಯಾರಿ ಮಾಡಿಕೊಳ್ಳುವ ಸಮಯದಲ್ಲಿ ಇತರೇ ಆಕರ್ಷಣೆಗೆ ಒಳಗಾಗದೆ ಜೀವನದ ಗುರಿಯನ್ನು ತಲುಪುವುದಕ್ಕಾಗಿ ಆ ದಿಟ್ಟಿನಲ್ಲಿ ಮಗ್ನರಾಗುವುದು ಯಶಸ್ಸಿಗೆ ಸಹಕಾರಿ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿಯಾದ ಆರ್. ಐಶ್ವರ್ಯ ಅವರು ಮಾತನಾಡಿ ಮಹಾತ್ಮ ಗಾಂಧೀಜಿಯವರ ಆಸೆಯಂತೆ ನಾವು ಜನಪರ ಸೇವೆಯನ್ನು ಮಾಡಬೇಕೆಂದು ಎಂದರು. ಗಾಂಧೀಜಿಯವರು ಹೇಳಿದಂತೆ ಸಮಾಜದ ಕಟ್ಟ ಕಡೆಯ ಮನುಷ್ಯನ ಆಸೆ ಈಡೇರಿಕೆ ಹಾಗೂ ಆತನ ಮುಖದಲ್ಲಿ ನಗು ಮೂಡುವಂತೆ ಸೇವೆಸಲ್ಲಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳು ಯಾವುದೇ ಸಂದರ್ಭದಲ್ಲೂ ಎದೆ ಗುಂದಬಾರದು. ಯಾವುದೇ ಅಂಜಿಕೆಯನ್ನು ಹೊಂದಿರಬಾರದು. ಯಶಸ್ವಿ ಆಗಲಿ, ಆಗದಿರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದನ್ನು ಬಿಡಬಾರದು ಎಂದರು.

ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರಾದ ಮಂಜುನಾಥ್ .ಬಿ ಅವರು ಮಾತನಾಡಿ ಸಿವಿಲ್ ಸಿಎಆರ್/ಡಿಎಆರ್ ಹಾಗೂ ಕೆ.ಎಸ್.ಆರ್.ಪಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಇಲ್ಲಿಯತನಕ ಒಟ್ಟು 10 ಅಣುಕು ಪರೀಕ್ಷೆಗಳನ್ನು ನಡೆಸಲಾಗಿದೆ. ಪರೀಕ್ಷೆಗಳ ಫಲಿತಾಂಶದಲ್ಲಿ ಹತ್ತಾರು ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ. ಮುಂದಿನ ದೈಹಿಕ ಪರೀಕ್ಷೆಗೂ ಮಾರ್ಗದರ್ಶನ ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದರು.



# ಸ್ವಂತ ಮನೆಯಲ್ಲಿ ನೂರೆಂಟು ಸಮಸ್ಯೆಗಳು; ಚರ್ಚೆ ಮಾತ್ರ ಇನ್ನೊಬ್ಬರ ಮನೆಯ ವಿಷಯದ ಬಗ್ಗೆ!



| ಶಿವಬಸಪ್ಪ ಗು. ಜಂಗಾಲಿ ಲೇಖಕರು ಹಾಗೂ ಸಾಹಿತಿ

ಬೆಳಗಿನ ಹೊತ್ತು. ಮನೆಯ ಅಂಗಳದಲ್ಲಿ ರಂಗೋಲಿ ಇನ್ನೂ ಅಳಿಸಿಹೋಗಿಲ್ಲ. ಅಡುಗೆಮನೆಯಿಂದ ಕಾಫಿಯ ಪರಿಮಳ ಹೊರಬರುತ್ತಿದೆ. ಮನೆಯ ಯಜಮಾನ ಕೈಯಲ್ಲಿ ಪತ್ರಿಕೆ ಹಿಡಿದು ಕುಳಿತಿದ್ದಾನೆ. ಆದರೆ ಅವನ ಗಮನ ಪತ್ರಿಕೆಯ ಸುದ್ದಿಗಳ ಮೇಲಿಲ್ಲ; ಪಕ್ಕದ ಮನೆಯ ಬಾಗಿಲಿನ ಮೇಲೆ. ಆ ಮನೆಯವರು ಇಂದು ಇಷ್ಟು ಬೇಗ ಏಕೆ ಹೊರಟರು ನಿನ್ನೆ ರಾತ್ರಿ ಯಾರೋ ಬಂದಿದ್ದರಂತೆ, ಯಾರು ಬಂದಿದ್ದರು ಅವರ ಮನೆಯಲ್ಲಿ ಏನೋ ಸಮಸ್ಯೆಯಂತೆ, ನಿಜವೇ ಹೀಗೆ ಪ್ರಶ್ನೆಗಳು ಅವನ ಮನಸ್ಸಿನಲ್ಲಿ ಓಡಾಡುತ್ತಿರುತ್ತವೆ. ಅಷ್ಟರಲ್ಲಿ ಮನೆಯೊಳಗಿನಿಂದ ಹೆಂಡತಿಯ ಧ್ವನಿ ಕೇಳಿಸುತ್ತದೆ. ?ವಿದ್ಯುತ್ ಬಿಲ್ ಕಟ್ಟಬೇಕು, ಮಗನ ಶಾಲಾ ಫೀಸ್ ಕೊಡಬೇಕು, ಅಮ್ಮನ ಔಷಧಿ ತರಬೇಕು. ಆದರೆ ತನ್ನ ಮನೆಯ ಸಮಸ್ಯೆಗಳಿಗಿಂತ ಪಕ್ಕದ ಮನೆಯ ವಿಚಾರವೇ ಆ ಕ್ಷಣದಲ್ಲಿ ಹೆಚ್ಚು ಆಸಕ್ತಿಕರವಾಗಿರುತ್ತದೆ. ಇದು ಕೇವಲ ಒಂದು ಮನೆಯ ಚಿತ್ರಣವಲ್ಲ; ನಮ್ಮ ಸುತ್ತಮುತ್ತಲಿನ ಅನೇಕ ಮನೆಗಳ ಮನಸ್ಥಿತಿಯ ಪ್ರತಿಬಿಂಬ.

ನಮ್ಮ ಮನೆಯ ಗೋಡೆಗಳ ಒಳಗೆ ನೂರೆಂಟು ಸಮಸ್ಯೆಗಳು ಮೌನವಾಗಿ ಕುಳಿತಿದ್ದರೂ, ಇನ್ನೊಬ್ಬರ ಮನೆಯ ಸಣ್ಣ ಶಬ್ದವೂ ನಮ್ಮ ಕುತೂಹಲವನ್ನು ಎಬ್ಬಿಸುತ್ತದೆ. ಕುಟುಂಬದಲ್ಲಿ ಗಂಡ-ಹೆಂಡತಿಯ ನಡುವೆ ಮಾತುಕತೆ ಕಡಿಮೆಯಾಗಿರಬಹುದು. ಮಕ್ಕಳೊಂದಿಗೆ ಭಾವನಾತ್ಮಕ ಅಂತರ ಬೆಳೆದಿರಬಹುದು. ವೃದ್ಧ ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ಬೇಕಿರಬಹುದು. ಸಾಲದ ಕಂತುಗಳು, ಉದ್ಯೋಗದ ಆತಂಕ, ಆರ್ಥಿಕ ಒತ್ತಡ, ಸಂಬಂಧಗಳ ಬಿರುಕು?ಹೀಗೆ ಹಲವು ಚಿಂತೆಗಳು ನಮ್ಮ ಬದುಕಿನ ಬಾಗಿಲು ತಟ್ಟುತ್ತಿರಬಹುದು. ಆದರೆ ಇವೆಲ್ಲವನ್ನೂ ಬದಿಗಿಟ್ಟು, ?ಅವರ ಮನೆಯಲ್ಲಿ ಏನಾಗಿದೆಯಂತೆ ಗೊತ್ತಾಎಂದು ಮಾತನಾಡಲು ಮಾತ್ರ ನಮಗೆ ಸಾಕಷ್ಟು ಸಮಯ ಸಿಗುತ್ತದೆ. ನಮ್ಮ ಮನೆಯ ಅಡುಗೆಯಲ್ಲಿ ಉಪ್ಪು ಜಾಸ್ತಿಯಾಯಿತೇ ಎಂಬುದನ್ನು ಗಮನಿಸುವುದಕ್ಕಿಂತ, ಪಕ್ಕದ ಮನೆಯ ಅಡುಗೆಯಲ್ಲಿ ಏನು ಬೇಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಹೆಚ್ಚಾಗಿರುವುದು ನಿಜಕ್ಕೂ ವಿಚಿತ್ರವಾದ ವಿರೋಧಾಭಾಸ.

ಮನುಷ್ಯನಿಗೆ ಕುತೂಹಲ ಸಹಜ. ಆದರೆ ಅದು ಮಿತಿ ಮೀರಿ ಮತ್ತೊಬ್ಬರ ವೈಯಕ್ತಿಕ ಬದುಕಿನ ಚರ್ಚೆಯಾಗಿ ಬದಲಾದಾಗ ಸಮಸ್ಯೆ ಆರಂಭವಾಗುತ್ತದೆ. ಯಾರಾದರೂ ಕುಟುಂಬದಲ್ಲಿ ಸಣ್ಣ ಮನಸ್ತಾಪ ನಡೆದಿರಬಹುದು. ಅದು ಅವರ ಮನೆಯ ನಾಲ್ಕು ಗೋಡೆಗಳೊಳಗೆ ಪರಿಹಾರವಾಗಬೇಕಾದ ವಿಷಯ. ಆದರೆ ಅದು ಹೊರಗೆ ಬಂದ ಕ್ಷಣಕ್ಕೆ ಹತ್ತು ಜನರ ಹತ್ತು ಅಭಿಪ್ರಾಯಗಳಿಗೆ ಆಹಾರವಾಗುತ್ತದೆ. ಒಬ್ಬರು ಕೇಳಿದ ವಿಷಯಕ್ಕೆ ಮತ್ತೊಬ್ಬರು ತಮ್ಮ ಊಹೆಯನ್ನು ಸೇರಿಸುತ್ತಾರೆ. ಮೂರನೆಯವರು ಅದಕ್ಕೆ ಇನ್ನಷ್ಟು ಬಣ್ಣ ಹಚ್ಚುತ್ತಾರೆ. ಕೊನೆಗೆ ನಿಜವಾಗಿ ನಡೆದದ್ದೇನು ಎಂಬುದು ಯಾರಿಗೂ ಗೊತ್ತಿರುವುದಿಲ್ಲ; ಆದರೆ ಕಥೆ ಮಾತ್ರ ಎಲ್ಲರಿಗೂ ಗೊತ್ತಿರುತ್ತದೆ. ಹೀಗೆ ಒಂದು ಕುಟುಂಬದ ಖಾಸಗಿ ನೋವು, ಬಡಾವಣೆಯ ಚರ್ಚೆಯ ವಿಷಯವಾಗಿ ಮಾರ್ಪಡುತ್ತದೆ.



ನಾನು ಯಾರಿಗೂ ಹೇಳುವುದಿಲ್ಲ, ನಿನಗೆ ಮಾತ್ರ ಹೇಳುತ್ತಿದ್ದೇನೆ ಎಂಬ ಮಾತಿನಿಂದ ಆರಂಭವಾಗುವ ಅನೇಕ ಸಂಭಾಷಣೆಗಳು ಕೊನೆಗೆ ಒಂದು ಮನೆಯ ಗೌರವವನ್ನು ಹಲವಾರು ಮನೆಗಳ ಬಾಗಿಲಿಗೆ ತಂದು ನಿಲ್ಲಿಸುತ್ತವೆ. ಗಾಸಿಪ್‌ಗೆ ಒಂದು ವಿಚಿತ್ರವಾದ ಶಕ್ತಿ ಇದೆ. ಅದು ಸತ್ಯವನ್ನು ಹುಡುಕುವುದಿಲ್ಲ; ಕುತೂಹಲವನ್ನು ತಣಿಸಲು ಕಥೆಯನ್ನು ಹುಡುಕುತ್ತದೆ. ಯಾರಾದರೂ ಸಂಕಷ್ಟದಲ್ಲಿದ್ದರೆ, ಅವರ ನೋವಿನ ಭಾರವನ್ನು ಕಡಿಮೆ ಮಾಡುವ ಬದಲು, ಆ ನೋವಿನ ವಿವರಗಳನ್ನು ಇನ್ನಷ್ಟು ಜನರಿಗೆ ತಲುಪಿಸುವುದರಲ್ಲಿ ಕೆಲವರು ಆಸಕ್ತಿ ತೋರುತ್ತಾರೆ. ಆದರೆ ನಿಜವಾದ ಮಾನವೀಯತೆ ಎಂದರೆ ಮತ್ತೊಬ್ಬರ ಕಣ್ಣೀರನ್ನು ಕಥೆಯನ್ನಾಗಿಸುವುದಲ್ಲ; ಸಾಧ್ಯವಾದರೆ ಆ ಕಣ್ಣೀರನ್ನು ಒರೆಸುವುದು.

ಇನ್ನೊಬ್ಬರ ಮನೆಯ ನಗುವಿನ ಹಿಂದೆ ಇರುವ ಕಣ್ಣೀರು ನಮಗೆ ಕಾಣುವುದಿಲ್ಲ. ಹೊರಗಿನಿಂದ ನೋಡಿದಾಗ ಒಂದು ಕುಟುಂಬ ಬಹಳ ಸಂತೋಷವಾಗಿರುವಂತೆ ಕಾಣಬಹುದು. ದೊಡ್ಡ ಮನೆ, ಹೊಸ ಕಾರು, ಉತ್ತಮ ಉದ್ಯೋಗ, ಮಕ್ಕಳ ಸಾಧನೆ?ಇವೆಲ್ಲವನ್ನೂ ನೋಡಿ ?ಅವರ ಜೀವನ ಎಷ್ಟು ಚೆನ್ನಾಗಿದೆ! ಎಂದುಕೊಳ್ಳಬಹುದು. ಆದರೆ ಪ್ರತಿಯೊಂದು ಮನೆಯಲ್ಲೂ ನಮಗೆ ಕಾಣದ ಕೆಲವು ಕಥೆಗಳಿರುತ್ತವೆ. ಕೆಲವರು ಆರ್ಥಿಕ ಸಂಕಷ್ಟದಲ್ಲಿದ್ದರೂ ನಗುತ್ತಾರೆ. ಕೆಲವರು ಸಂಬಂಧಗಳ ನೋವನ್ನು ಮನಸ್ಸಿನೊಳಗೆ ಮುಚ್ಚಿಟ್ಟುಕೊಂಡು ಬದುಕುತ್ತಾರೆ. ಹೊರಗಿನಿಂದ ಕಾಣುವುದು ಮನೆಯ ಬಣ್ಣ; ಒಳಗೆ ನಡೆಯುತ್ತಿರುವ ಬದುಕಿನ ಬಣ್ಣ ನಮಗೆ ತಿಳಿದಿರುವುದಿಲ್ಲ. ಆದ್ದರಿಂದ ಇನ್ನೊಬ್ಬರ ಬದುಕನ್ನು ಸಂಪೂರ್ಣವಾಗಿ ತಿಳಿದಿದ್ದೇವೆ ಎಂಬ ಭ್ರಮೆಯಲ್ಲಿ ತೀರ್ಪು ನೀಡುವುದು ತಪ್ಪು.

ಇಂದು ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಈ ಪ್ರವೃತ್ತಿ ಇನ್ನಷ್ಟು ಹೆಚ್ಚಾಗಿದೆ. ಮೊಬೈಲ್ ಪರದೆ ತೆರೆದರೆ ಸಾಕು, ಯಾರ ಜೀವನದಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಮತ್ತೊಬ್ಬರ ಸುಂದರ ಕ್ಷಣಗಳನ್ನು ನೋಡಿ, ನಮ್ಮ ಬದುಕಿನೊಂದಿಗೆ ಹೋಲಿಕೆ ಮಾಡಿಕೊಳ್ಳುತ್ತೇವೆ. ಆದರೆ ಅವರ ನಗುವಿನ ಹಿಂದೆ ಇರುವ ನೋವು ನಮಗೆ ಗೊತ್ತಿರುವುದಿಲ್ಲ. ಹೀಗೆ ಹೊರಗಿನವರ ಬದುಕನ್ನು ನೋಡುವುದರಲ್ಲಿ ಮುಳುಗಿ, ನಮ್ಮದೇ ಬದುಕನ್ನು ಮರೆತುಬಿಡುವ ಅಪಾಯವಿದೆ.

ನಮ್ಮ ಕುಟುಂಬದೊಳಗೆ ಏನಾಗುತ್ತಿದೆ ಎಂಬುದನ್ನು ಗಮನಿಸುವುದಕ್ಕಿಂತ ಹೊರಗಿನವರ ಬದುಕಿನ ಬಗ್ಗೆ ಹೆಚ್ಚು ಆಸಕ್ತಿ ತೋರಿಸುವುದು ದೊಡ್ಡ ಸಮಸ್ಯೆಗೆ ಕಾರಣವಾಗುತ್ತಿದೆ. ಮಗ ಶಾಲೆಯಿಂದ ಮನೆಗೆ ಬಂದಾಗ ?ಊಟ ಮಾಡಿದ್ದೀಯಾಎಂದು ಕೇಳುತ್ತೇವೆ; ಆದರೆ ?ಇಂದು ಶಾಲೆಯಲ್ಲಿ ಏನಾಯಿತು ನಿನಗೆ ಏನಾದರೂ ಚಿಂತೆ ಇದೆಯಾಎಂದು ಕೇಳಲು ಸಮಯವಿಲ್ಲ. ಹೆಂಡತಿ ದಿನವಿಡೀ ಕೆಲಸ ಮಾಡಿ ದಣಿದಿದ್ದರೂ, ಅವಳ ಮುಖದಲ್ಲಿನ ಆಯಾಸವನ್ನು ಗಮನಿಸುವುದಿಲ್ಲ. ವೃದ್ಧ ತಂದೆ-ತಾಯಿ ಮನೆಯ ಒಂದು ಮೂಲೆಯಲ್ಲಿ ಕುಳಿತಿದ್ದರೂ, ಅವರ ಮಾತುಗಳನ್ನು ಕೇಳಲು ಸಮಯವಿಲ್ಲ. ಆದರೆ ಪಕ್ಕದ ಮನೆಯ ವಿಚಾರ ಚರ್ಚಿಸಲು ಮಾತ್ರ ಗಂಟೆಗಟ್ಟಲೆ ಸಮಯ ಸಿಗುತ್ತದೆ. ಇದೇ ನಮ್ಮ ಬದುಕಿನ ದೊಡ್ಡ ವ್ಯಂಗ್ಯ.

ಕುಟುಂಬವೆಂದರೆ ಕೇವಲ ಒಂದೇ ಸೂರಿನಡಿ ವಾಸಿಸುವ ಜನರ ಗುಂಪಲ್ಲ. ಅದು ಪರಸ್ಪರ ಅರ್ಥಮಾಡಿಕೊಳ್ಳುವ ಮನಸ್ಸುಗಳ ಆಶ್ರಯ. ಅಲ್ಲಿ ಮಾತುಗಳಿಗೆ ಜಾಗ ಇರಬೇಕು; ನೋವಿಗೆ ನೆಲೆ ಇರಬೇಕು; ತಪ್ಪುಗಳಿಗೆ ಕ್ಷಮೆ ಇರಬೇಕು; ಸಂತೋಷಕ್ಕೆ ಹಂಚಿಕೊಳ್ಳುವ ಹೃದಯ ಇರಬೇಕು. ಹೊರಗಿನವರ ಬದುಕಿನ ಬಗ್ಗೆ ಮಾತನಾಡುವುದರಿಂದ ನಮ್ಮ ಮನೆಯ ಸಂಬಂಧಗಳು ಸುಧಾರಿಸುವುದಿಲ್ಲ. ಆದರೆ ಮನೆಯವರೊಂದಿಗೆ ಒಂದು ಪ್ರಾಮಾಣಿಕ ಸಂಭಾಷಣೆ ನಡೆಸಿದರೆ, ಹಲವು ವರ್ಷಗಳಿಂದ ಮನಸ್ಸಿನಲ್ಲಿ ಉಳಿದಿರುವ ಬಿರುಕು ಕೂಡ ನಿಧಾನವಾಗಿ ಗುಣವಾಗಬಹುದು. ಇನ್ನೊಬ್ಬರ ಮನೆಯ ಸಮಸ್ಯೆ ನಮ್ಮ ಗಮನಕ್ಕೆ ಬಂದಾಗ ನಾವು ಎರಡು ದಾರಿಗಳನ್ನು ಆಯ್ಕೆ ಮಾಡಬಹುದು. ಒಂದು, ಅದನ್ನು ನಾಲ್ಕು ಜನರ ಬಳಿ ಹೇಳಿಕೊಂಡು ತಿರುಗುವುದು. ಮತ್ತೊಂದು, ನಿಜವಾಗಿಯೂ ಸಹಾಯ ಮಾಡಬಹುದೇ ಎಂದು ಯೋಚಿಸುವುದು. ಯಾರಾದರೂ ಆರ್ಥಿಕ ಸಂಕಷ್ಟದಲ್ಲಿದ್ದರೆ, ಅವರ ನೋವನ್ನು ಚರ್ಚಿಸುವುದರಿಂದ ಏನು ಪ್ರಯೋಜನ ಸಾಧ್ಯವಾದರೆ ಸಹಾಯ ಮಾಡೋಣ. ಯಾರಾದರೂ ಅನಾರೋಗ್ಯದಲ್ಲಿದ್ದರೆ, ಅವರ ಬಗ್ಗೆ ಮಾತನಾಡುವುದಕ್ಕಿಂತ ನೆರವಾಗೋಣ. ಯಾರಾದರೂ ಕುಟುಂಬದ ಸಮಸ್ಯೆಯಿಂದ ಬಳಲುತ್ತಿದ್ದರೆ, ಅವರ ಖಾಸಗಿತನವನ್ನು ಗೌರವಿಸಿ, ಧೈರ್ಯದ ಎರಡು ಮಾತು ಹೇಳೋಣ. ಸಹಾಯ ಮಾಡಲು ಸಾಧ್ಯವಾಗದಿದ್ದರೂ ಮೌನವಾಗಿರುವುದು ಕೆಲವೊಮ್ಮೆ ದೊಡ್ಡ ಮಾನವೀಯತೆ.

ನಾವು ಇನ್ನೊಬ್ಬರ ತಪ್ಪುಗಳನ್ನು ಎಣಿಸುವಲ್ಲಿ ತೋರಿಸುವ ಆಸಕ್ತಿಯ ಅರ್ಧದಷ್ಟು ಆಸಕ್ತಿಯನ್ನು ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ತೋರಿಸಿದರೆ, ನಮ್ಮ ಬದುಕು ಬಹಳ ಸುಂದರವಾಗಬಹುದು. ಮತ್ತೊಬ್ಬರ ಮಗುವಿನ ಅಂಕಗಳ ಬಗ್ಗೆ ಮಾತನಾಡುವ ಮೊದಲು ನಮ್ಮ ಮಗುವಿನ ಮನಸ್ಸನ್ನು ಕೇಳಬೇಕು. ಇನ್ನೊಬ್ಬರ ಕುಟುಂಬದಲ್ಲಿ ಏನಾಗಿದೆ ಎಂದು ಚರ್ಚಿಸುವ ಮೊದಲು, ನಮ್ಮ ಮನೆಯ ಸಂಬಂಧಗಳಲ್ಲಿ ಪ್ರೀತಿ ಮತ್ತು ಗೌರವ ಇದೆಯೇ ಎಂದು ನೋಡಬೇಕು. ಯಾರೋ ಸಾಲದಲ್ಲಿ ಮುಳುಗಿದ್ದಾರೆ ಎಂದು ಮಾತನಾಡುವ ಮೊದಲು, ನಮ್ಮದೇ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲಿಸಬೇಕು.

ಬದುಕು ತುಂಬಾ ಚಿಕ್ಕದು. ನಾವು ಇನ್ನೊಬ್ಬರ ಮನೆಯ ವಿಚಾರಗಳನ್ನು ಚರ್ಚಿಸುತ್ತಾ ಕಳೆಯುವ ಸಮಯ, ನಮ್ಮ ಮನೆಯವರೊಂದಿಗೆ ಕಳೆಯಬಹುದಾದ ಅಮೂಲ್ಯ ಕ್ಷಣಗಳು. ನಾವು ಇನ್ನೊಬ್ಬರ ತಪ್ಪುಗಳನ್ನು ಎಣಿಸುತ್ತಾ ಕಳೆಯುವ ಸಮಯ, ನಮ್ಮದೇ ತಪ್ಪುಗಳನ್ನು ಸರಿಪಡಿಸಿಕೊಳ್ಳಬಹುದಾದ ಅವಕಾಶಗಳು. ಕಾಲ ಮರಳಿ ಬರುವುದಿಲ್ಲ. ಆದರೆ ನಾವು ಹೇಗೆ ಬದುಕಬೇಕು ಎಂಬ ನಿರ್ಧಾರ ಮಾತ್ರ ನಮ್ಮ ಕೈಯಲ್ಲಿದೆ.

ಆದ್ದರಿಂದ ಇನ್ನೊಬ್ಬರ ಮನೆಯ ಕಿಟಕಿಯೊಳಗೆ ಇಣುಕುವ ಮೊದಲು, ನಮ್ಮ ಮನೆಯ ಕನ್ನಡಿಯಲ್ಲಿ ಒಮ್ಮೆ ನಮ್ಮನ್ನೇ ನೋಡೋಣ. ನಮ್ಮ ಮಗುವಿನ ಮೌನ, ಸಂಗಾತಿಯ ನೋವು, ತಂದೆ-ತಾಯಿಯ ನಿರೀಕ್ಷೆ, ನಮ್ಮದೇ ಮನಸ್ಸಿನ ಅಶಾಂತಿ?ಇವೆಲ್ಲವೂ ನಮ್ಮ ಗಮನಕ್ಕಾಗಿ ಕಾಯುತ್ತಿರಬಹುದು. ಅವುಗಳನ್ನು ಬಿಟ್ಟು ಇನ್ನೊಬ್ಬರ ಬದುಕಿನ ಪುಟಗಳನ್ನು ಓದುವುದರಿಂದ ನಮ್ಮ ಪುಸ್ತಕ ಸುಂದರವಾಗುವುದಿಲ್ಲ.

ಸ್ವಂತ ಮನೆಯಲ್ಲಿ ನೂರೆಂಟು ಸಮಸ್ಯೆಗಳಿದ್ದರೂ, ಇನ್ನೊಬ್ಬರ ಮನೆಯ ವಿಷಯ ಚರ್ಚಿಸುವುದರಲ್ಲಿ ಯಾವುದೇ ಸಾಧನೆಯಿಲ್ಲ. ನಮ್ಮ ಮನೆಯ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ, ನಮ್ಮ ಮನೆಯವರನ್ನು ಅರ್ಥಮಾಡಿಕೊಳ್ಳುವುದರಲ್ಲಿ, ನಮ್ಮ ಮನೆಯ ಪ್ರೀತಿಯನ್ನು ಉಳಿಸಿಕೊಳ್ಳುವುದರಲ್ಲಿ ನಿಜವಾದ ಬದುಕಿನ ಸೌಂದರ್ಯವಿದೆ. ಇನ್ನೊಬ್ಬರ ಮನೆಯ ಕಥೆ ನಮಗೆ ಮನರಂಜನೆಯಾಗಬಹುದು; ಆದರೆ ನಮ್ಮ ಮನೆಯ ಸಂತೋಷವೇ ನಮ್ಮ ಬದುಕಿನ ನಿಜವಾದ ಸಂಪತ್ತು.

# ಶಕ್ತಿ



| ರೂಪ ಮಂಜುನಾಥ ಹೊಳೆನರಸೀಪುರ

ಪುರಾಣದ ಅಧ್ಯಾತ್ಮದಿಂದ ವಿಜ್ಞಾನದ ಮೈಟೊಕಾಂಡ್ರಿಯಾವರೆಗೆ!"ಯಾ ದೇವಿ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ..."ಭಾರತೀಯ ಸಂಸ್ಕೃತಿ ಮತ್ತು ಪುರಾಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿ ಸ್ತ್ರೀಯನ್ನು ಕೇವಲ ಸಂಸಾರದ ಕಣ್ಣಾಗಿ ನೋಡದೆ 'ಸೃಷ್ಟಿಯ ಮೂಲಶಕ್ತಿ'ಯಾಗಿ ಆರಾಧಿಸಿರುವುದು ಕಂಡುಬರುತ್ತದೆ. 'ಶಿವಂ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ', ಶಕ್ತಿ ಇಲ್ಲದೆ ಶಿವನೂ ನಿಶ್ಚಲ! ಎಂದು ಶ್ರೀಶಂಕರ ಭಗವತ್ಪಾದರೇ ಉದ್ಘೋಷಿಸಿದರು. ಅಂದರೆ ಚೇತನಕ್ಕೆ ಜೀವತುಂಬುವ, ಜಗತ್ತನ್ನು ಮುನ್ನಡೆಸುವ ಹಾಗೂ ಪೋಷಿಸುವ ಪರಮ ಚೈತನ್ಯವೇ 'ಸ್ತ್ರೀ'.

ಆದರೆ, ಇದು ಕೇವಲ ಪುರಾಣಗಳ ಭಕ್ತಿಭಾವದ ರೂಪಕವಷ್ಟೇಯೇಅಥವಾ ಇದರ ಹಿಂದೆ ಯಾವುದಾದರೂ ಗೂಢವಾದ ವೈಜ್ಞಾನಿಕ ಸತ್ಯ ಅಡಗಿದೆಯೇಎನ್ನುವುದಾದರೆ?

ಇಂದಿನ ಆಧುನಿಕ ಜೈವಿಕ ವಿಜ್ಞಾನ ಹಾಗೂ ಜೀನ್ ತಂತ್ರಜ್ಞಾನದ ಬಾಗಿಲು ತಟ್ಟಿದಾಗ, ನಮ್ಮ ಹಿರಿಯರು ಸಾವಿರಾರು ವರ್ಷಗಳ ಹಿಂದೆಯೇ ಉದ್ಘೋಷಿಸಿದ 'ಸ್ತ್ರೀಯೇ ಶಕ್ತಿ' ಎಂಬ ಮಾತು ಎಷ್ಟು ತಾರ್ಕಿಕ ಮತ್ತು ವೈಜ್ಞಾನಿಕ ಎಂಬ ವಿಸ್ಮಯಕಾರಿ ಸತ್ಯ ಅನಾವರಣಗೊಳ್ಳುತ್ತದೆ. ಪುರಾಣದ ಅಧ್ಯಾತ್ಮಿಕ ಪರಿಕಲ್ಪನೆ ಹಾಗೂ ಜೀವಕೋಶಗಳ ವೈಜ್ಞಾನಿಕ ಹಿನ್ನೆಲೆಯನ್ನು ಬೆಸೆದು ನೋಡುವ ಸಣ್ಣ ಪ್ರಯತ್ನವೇ ಈ ಲೇಖನ.

ಹಿಂದೂ ಪುರಾಣಗಳಲ್ಲಿ ಸ್ತ್ರೀಯನ್ನು 'ಶಕ್ತಿ' ಎಂದು ಕರೆಯುವುದು ಕೇವಲ ಧಾರ್ಮಿಕ ಸಂಕೇತವಲ್ಲ, ಅದು ಬ್ರಹ್ಮಾಂಡದ ಸೃಷ್ಟಿ ಮತ್ತು ನಿರ್ವಹಣೆಯ ಮೂಲತತ್ತ್ವ. ಪುರಾಣಗಳ ಹಿನ್ನೆಲೆ ಹಾಗೂ ಆಧುನಿಕ ವಿಜ್ಞಾನದ ದೃಷ್ಟಿಕೋನವನ್ನು ಸಮ್ಮಿಳಿತಗೊಳಿಸಿ ನಾವಿಲ್ಲಿ ಅರ್ಥೈಸಿಕೊಳ್ಳಬಹುದು.



**ಪುರಾಣಗಳಲ್ಲಿ 'ಶಕ್ತಿ' ಎನ್ನಲು ಕಾರಣಗಳು?**

ಸೃಷ್ಟಿ ಮತ್ತು ಪೋಷಣೆ: ಪ್ರಕೃತಿಯೇ ಶಕ್ತಿಯ ರೂಪ. ಜಗತ್ತಿಗೆ ಜೀವ ಕೊಡುವ, ಬೆಳೆಸುವ ಮತ್ತು ಪೋಷಿಸುವ ಸಾಮರ್ಥ್ಯ ಸ್ತ್ರೀಯಲ್ಲಿದೆ.

ಚೈತನ್ಯದ ಮೂಲ: ಶಿವನು 'ಅರೂಡಪ' ಅಥವಾ ನಿಶ್ಚಲ ಚೇತನವಾದರೆ, ಆ ಚೇತನವನ್ನು ಕ್ರಿಯಾಶೀಲಗೊಳಿಸುವ ಚಲನಶೀಲ ಶಕ್ತಿಯೇ ದೇವತೆ (ಪ್ರಕೃತಿ).

ತ್ರಿಗುಣ ವೈವಿಧ್ಯ: ಜ್ಞಾನ (ಸರಸ್ವತಿ), ಐಶ್ವರ್ಯ/ಪೋಷಣೆ (ಲಕ್ಷ್ಮಿ), ಮತ್ತು ಧೈರ್ಯ/ಸಂಹಾರ (ಕಾಳಿ/ದುರ್ಗೆ) ಈ ಮೂರೂ ಜೀವಾವಶ್ಯಕ ಗುಣಗಳ ಸಾಕಾರರೂಪವೇ ಸ್ತ್ರೀಶಕ್ತಿ.

ವೈಜ್ಞಾನಿಕವಾಗಿ ಈ ಹೋಲಿಕೆ ಸಾಬೀತಾಗುತ್ತದೆಯೇ?

ಹೌದು, ಆಧುನಿಕ ಜೈವಿಕ ಹಾಗೂ ಶರೀರಶಾಸ್ತ್ರದ ದೃಷ್ಟಿಯಲ್ಲಿಯೂ ಈ ಹೋಲಿಕೆಗೆ ಸ್ಪಷ್ಟ ಸಾಕ್ಷ್ಯಾಧಾರಗಳಿವೆ:

ಮೈಟೊಕಾಂಡ್ರಿಯಲ್ ಆಓಂ (Mitochondrial DNA): ಜೀವಕೋಶಗಳಿಗೆ ಶಕ್ತಿ ನೀಡುವ ಪವರ್‌ಹೌಸ್ ಎನಿಸಿದ ಮೈಟೊಕಾಂಡ್ರಿಯಾ ಮತ್ತು ಅದರ ಆಓಂ ಪ್ರತಿಯೊಬ್ಬ ಮಗುವಿಗೂ ಕೇವಲ ತಾಯಿಯಿಂದ ಮಾತ್ರ ಬಳುವಳಿಯಾಗಿ ಬರುತ್ತದೆ. ವೈಜ್ಞಾನಿಕವಾಗಿ ಜೀವದ ನಿಜವಾದ 'ಶಕ್ತಿಯ ಸೆಲ್' ತಾಯಿಯೇ.

**ಸಹನಶೀಲತೆ ಹಾಗೂ ನರಮಂಡಲ:** ಮಹಿಳೆಯರ ದೇಹದಲ್ಲಿ ನೋವನ್ನು ತಡೆಯುವ ಸಾಮರ್ಥ್ಯ ಹಾಗೂ ಮಗುವಿಗೆ ಜನ್ಮ ನೀಡುವಾಗ ಎದುರಿಸುವ ಶಾರೀರಿಕ ದೈಹಿಕ ಒತ್ತಡವನ್ನು ತಡೆಯುವ ಹಾರ್ಮೋನು ವ್ಯವಸ್ಥೆ ಅತ್ಯಂತ ಪ್ರಬಲವಾದದ್ದು.

**ಮಲ್ಟಿಟಾಸ್ಕಿಂಗ್ ಮತ್ತು ಮೆದುಳಿನ ರಚನೆ:** ಮೆದುಳಿನ ಎರಡೂ ಗೋಳಾರ್ಧಗಳನ್ನು ಬೆಸೆಯುವ 'ಕಾರ್ಪಸ್ ಕಲ್ಲೋಸಮ್' ಭಾಗವು ಸ್ತ್ರೀಯರಲ್ಲಿ ಹೆಚ್ಚು ಸಾಂದ್ರವಾಗಿರುತ್ತದೆ. ಇದು ಭಾವನಾತ್ಮಕ ಹಾಗೂ ತಾರ್ಕಿಕ ಚಿಂತನೆಗಳನ್ನು ಒಟ್ಟಿಗೆ ನಿರ್ವಹಿಸುವ ಸಾಟಿಯಿಲ್ಲದ ಕೌಶಲವನ್ನು ನೀಡುತ್ತದೆ.

ನಮ್ಮ ಪೂರ್ವಜರು ವಿಜ್ಞಾನವನ್ನು ಇಂದಿನ ಪ್ರಯೋಗಾಲಯಗಳ (Labs)ರೂಪದಲ್ಲಿ ನೋಡದೆ, ಅದನ್ನು ಜೀವನ ವಿಧಾನ ಮತ್ತು ತತ್ತ್ವಚಿಂತನೆಗಳಲ್ಲಿ ಬೆಸೆದು ನಿರೂಪಿಸಿದ್ದರು.

ಸಾಂಕೇತಿಕ ಜ್ಞಾನ: ಇಂದು ನಮಗೆ ಸೂಕ್ಷ್ಮದರ್ಶಕ (Microscope) ಅಥವಾ ಜೀನ್ ತಂತ್ರಜ್ಞಾನದ ಮೂಲಕ ತಿಳಿಯುತ್ತಿರುವ ಜೈವಿಕ ಸತ್ಯಗಳನ್ನು, ಅಂದಿನ ಋಷಿಮುನಿಗಳು ದಿವ್ಯದೃಷ್ಟಿ ಹಾಗೂ ಸೂಕ್ಷ್ಮ ಅನುಭವದ ಮೂಲಕ ಗ್ರಹಿಸಿ 'ಶಕ್ತಿ' ಎಂಬ ಸಾಂಕೇತಿಕ ರೂಪದಲ್ಲಿ ಸಮಾಜಕ್ಕೆ ತಲುಪಿಸಿದ್ದರು.

**ವಿಜ್ಞಾನ ಮತ್ತು ಅಧ್ಯಾತ್ಮದ ಸಮ್ಮಿಲನ:** ಆಧುನಿಕ ವಿಜ್ಞಾನವು ಜೀವಕೋಶದ ಮೈಟೊಕಾಂಡ್ರಿಯಾವನ್ನು 'ಪವರ್‌ಹೌಸ್' ಎಂದು ಕಾಗದದ ಮೇಲೆ ಸಾಬೀತುಪಡಿಸಿದರೆ, ನಮ್ಮ ಪೂರ್ವಜರು ಅದೇ ಶಕ್ತಿಯನ್ನು ಜೀವನದ ಪ್ರತಿ ಹಂತದಲ್ಲೂ ಗೌರವಿಸಬೇಕಾದ 'ಪ್ರಕೃತಿ ತತ್ತ್ವ'ವಾಗಿ ಆರಾಧಿಸಲು ಕಲಿಸಿದರು.

ಕಾಲಾತೀತ ದೂರದೃಷ್ಟಿ: ಸ್ತ್ರೀಯು ಕೇವಲ ಶಾರೀರಿಕವಾಗಿ ಅಲ್ಲ, ಪ್ರಕೃತಿಯ ಚೈತನ್ಯ ರೂಪವಾಗಿ ಜಗತ್ತನ್ನು ಮುನ್ನಡೆಸುವ ಮೂಲಶಕ್ತಿ ಎಂಬ ಸತ್ಯವನ್ನು ಸಾವಿರಾರು ವರ್ಷಗಳ ಹಿಂದೆಯೇ ಗುರುತಿಸಿದ್ದು ಅಂದಿನ ಚಿಂತಕರ ಅಪಾರವಾದ ಜ್ಞಾನ ಮತ್ತು ಜಾಗತಿಕ ದೂರದೃಷ್ಟಿಗೆ ಸಾಕ್ಷಿ.

"ಹೀಗೆ, ಪುರಾಣಗಳು ನೀಡಿದ ಸಾಂಕೇತಿಕ ಶಕ್ತಿ ತತ್ತ್ವವನ್ನು ಇಂದಿನ ಜೈವಿಕ ವಿಜ್ಞಾನವು ನಿಜವೆಂದು ಸಾಬೀತುಪಡಿಸುತ್ತಿರುವುದನ್ನು ನೋಡಿದರೆ, ನಮ್ಮ ಹಿರಿಯರ ಜ್ಞಾನಮಟ್ಟ ಹಾಗೂ ಗ್ರಹಿಕಾ ಶಕ್ತಿ ಎಷ್ಟೊಂದು ಆಳವಾಗಿತ್ತು ಎಂಬುದು ಅರಿವಾಗುತ್ತದೆ. ವಿಜ್ಞಾನ ಇಂದು ಕಂಡುಕೊಳ್ಳುತ್ತಿರುವುದನ್ನು ನಮ್ಮ ಸಂಸ್ಕೃತಿ ಎಂದೋ ತನ್ನ ಜೀವನಧರ್ಮದಲ್ಲಿ ಅಳವಡಿಸಿಕೊಂಡಿತ್ತು ಎನ್ನುವುದೇ ಭಾರತೀಯ ತತ್ತ್ವಶಾಸ್ತ್ರದ ಹಿರಿಮೆ."

**ವಂದನೆಗಳು.**

# ನೆಮ್ಮದಿಯ ಮನಸ್ಸಿಗೆ ಮೃತ್ಯುವಿನ ಸ್ಪರ್ಶವಿಲ್ಲ



ನೆಮ್ಮದಿ ಎಂದರೆ ಅಂತರಂಗಕ್ಕೆ ಸುಳಿಯುವ ಮಲಯ ಮಾರುತ. ಆ ಮಾರುತ ಸುಳಿದಾಗ ದೇಹದಲ್ಲಿ ಆನಂದದ ಹಾರ್ಮೋನ್ ಆದ ಆಕ್ಸಿಟೋಸಿನ್ ಜಿನುಗಿ, ರಕ್ತನಾಳಗಳನ್ನು ಸಡಿಲಗೊಳಿಸಿ ಹೃದಯಕ್ಕೆ ನಿರಾಳತೆ ನೀಡುತ್ತದೆ. ಜಪಾನಿನ ವಿಜ್ಞಾನಿಗಳು ಶ್ಲಾಘಿಸುವ ?ಶಿನ್ರಿನ್-ಯೋಕು? ಎಂಬ ವನಸ್ನಾನವು ಕಾರ್ಟಿಸಾಲ್ ವಿಷವನ್ನು ಇಳಿಸಿ, ರೋಗನಿರೋಧಕ ಶಕ್ತಿಯನ್ನು ಪ್ರಖರಗೊಳಿಸುತ್ತದೆ. ಪ್ರಶಾಂತ ಚಿತ್ತವು ಆಯುಷ್ಯದ ಗಡಿಯಾರವನ್ನು ಮೆಲ್ಲನೆ ಚಲಿಸಿ, ವಾರ್ಧಕ್ಯಕ್ಕೆ ಅಂಕುಶ ಹಾಕುತ್ತದೆ.

ಪ್ರಸನ್ನ ವ್ಯಕ್ತಿ ಸಮಾಜಕ್ಕೆ ನೆರಳಿತ್ತ ಆಲದ ಮರವಿದ್ದಂತೆ. ಅಂಗಳದಲ್ಲಿ ಹಿರಿಯರು ಕಿರಿಯರಿಗೆ ಜಾನಪದ ಆಟ ಕಲಿಸಿದಾಗ ಪರದೆಯ ದಾಸ್ಯ ಮಾಯವಾಗಿ ಅನುಬಂಧದ ಅಮೃತ ಹರಿಯುತ್ತದೆ. ಬಾಯಾರಿದ ಶ್ವಾನಕ್ಕೆ ನೀರಿಟ್ಟ ಬಾಲಕನ ಎದೆಯಲ್ಲಿ ಅನುಕಂಪದ ಅಂಕುರ ಚಿಗುರುತ್ತದೆ. ಹಬ್ಬದಲ್ಲಿ ದೀನರಿಗೆ ಅನ್ನದಾನ ನಡೆದಾಗ ಇಡೀ ಊರಿನಲ್ಲಿ ಮನುಷ್ಯತ್ವದ ಪರಿಮಳ ಪಸರಿಸುತ್ತದೆ.

ನೆಮ್ಮದಿಯನ್ನು ಒಲಿಸಿಕೊಳ್ಳಲು ದೊಡ್ಡ ತಪಸ್ಸು ಬೇಕಿಲ್ಲ. ಪ್ರಾತಃಕಾಲ ದೂರವಾಣಿಯ ಬದಲು ಗವಾಕ್ಷಿಯಾಚೆಗಿನ ನೀಲಾಂಬರವನ್ನು ದರ್ಶಿಸಿ. ದಿನಕ್ಕೊಂದು ಕೃತಜ್ಞತೆಯ ನುಡಿ ಉದುರಿಸಿ. ಗ್ರಾಸದ ರುಚಿಯನ್ನು ಎಚ್ಚರದಿಂದ ಆಸ್ವಾದಿಸಿ. ಸಂಜೆಯ ಅರುಣಾಸ್ತವನ್ನು ನಿಮಿಷಗಳ ಕಾಲ ವೀಕ್ಷಿಸಿ. ನಿದ್ರೆಗೆ ಮುನ್ನ ನಗು ತರಿಸಿದ ನೆನಪನ್ನು ಎದೆಯಲ್ಲಿಟ್ಟುಕೊಳ್ಳಿ.

ಪ್ರಶಾಂತ ಹೃದಯಕ್ಕೆ ಅಂತ್ಯದ ಅಂಜಿಕೆಯಿಲ್ಲ, ಏಕೆಂದರೆ ಅದು ಪ್ರತಿ ಕ್ಷಣವನ್ನೂ ಉತ್ಸವವಾಗಿಸುತ್ತದೆ. ಅಂತಹ ಚೇತನ ಕಾಯವನ್ನು ತ್ಯಜಿಸಿದರೂ ಜನಮಾನಸದಲ್ಲಿ ಚಿರಹಸಿರಾಗಿ ಉಳಿಯುತ್ತದೆ. ನೆಮ್ಮದಿಯೇ ನಿತ್ಯ ಅಮೃತ, ಅದನ್ನು ಸವಿದವರಿಗೆ ಮರಣವು ಕೇವಲ ಒಂದು ದ್ವಾರ.

ಅಂಕಣ-25

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಹಾಸನದ ಗಣಪತಿ ಪೆಂಡಾಲಿನಲ್ಲಿ ಕಾವ್ಯ ಗಾನ ನಾಟ್ಯ ಕುಂಚ ಕಾರ್ಯಕ್ರಮ

**ಹಾಸನ:** ಕರ್ನಾಟಕ ರಾಜ್ಯ ಸ್ಪಂದನ ಸಿರಿ ವೇದಿಕೆ, ಇನ್ನೂರೆನ್ಸ್ ಪುಟ್ಟೇಗೌಡ ಟ್ರಸ್ಟ್, ಶ್ರೀ ಗಣಪತಿ ಸೇವಾ ಸಮಿತಿ ಹಾಗೂ ಶ್ರೀ ಹೊಯ್ಸಳ ಚಿತ್ರಕಲಾ ಪರಿಷತ್ ಹಾಸನ ಇವರುಗಳ ಸಹಯೋಗದಲ್ಲಿ ಹಾಸನ ನಗರದ ಹಳೇ ಬಸ್ ಸ್ಟ್ಯಾಂಡ್ ರಸ್ತೆ, ಶ್ರೀ ಗಣಪತಿ ಪೆಂಡಾಲ್ ನಲ್ಲಿ ದಿನಾಂಕ 24.09.2026ರ ಗುರುವಾರ ಸಂಜೆ 7 ಗಂಟೆಗೆ ಕಾವ್ಯ ಗಾನ ನಾಟ್ಯ ಕುಂಚ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕವಿ/ಕವಯತ್ರಿಯರಾದ ಮಲ್ಲೇಶ್ ಜಿ. ಕಲಾವತಿ ಮಧುಸೂದನ್, ಗೊರೂರು ಅನಂತರಾಜು, ಸುಶೀಲಾ ಸೋಮಶೇಖರ್, ಶೈಲಜಾ ಹಾಸನ್, ಎಸ್. ಎಸ್. ಪುಟ್ಟೇಗೌಡ, ಜಿ.ಆರ್.ಶ್ರೀಕಾಂತ್ ವೈ.ಬಿ. ಕಾಂತರಾಜು ಗಿರಿಜಾಂಬ ಬಾಳ್ಳುಪೇಟೆ, ರಾಜೇಶ್ವರಿ ಹುಲ್ಲೇನಹಳ್ಳಿ ಸ್ವರಚಿತ ಕವಿತೆ ವಾಚಿಸುವರು. ವಾಚಿಸಲ್ಪಡುವ ಕವಿತೆಗಳಿಗೆ ಗಾಯಕರು ರಾಗ ಸಂಯೋಜಿಸಿ ಹಾಡುವರು ಗಾಯಕರಾದ ಯೋಗೇಂದ್ರ ದುದ್ದ, ಶ್ರೀಕಾಂತ್, ಕಲಾವತಿ ಮಧುಸೂಧನ್, ಉಮಾ ವಿಶ್ವನಾಥ್, ಶೋಭಾ ಹರೀಶ್ ಹಾಡುವರು. ಚಿತ್ರ ಕಲಾವಿದರಾದ ದೇವರಾಜು, ಚಂದ್ರಪ್ರಭ, ಬಸವರಾಜು, ಶಿವಕುಮಾರ್, ಸ್ಫೂರ್ತಿ, ಸಿಂಚನ, ಯಶ್, ಬಸವರಾಜ್ ಭಗತ್, ಹೇಮಲತಾ ವೇದಿಕೆಯಲ್ಲಿ ಗಾಯಕ/ಗಾಯಕಿಯರು ಹಾಡು ಹೇಳುವ ಸಮಯದಲ್ಲಿ ಪ್ರೇಕ್ಷಕರೆದುರು ಕವಿ ಕಲ್ಪನೆಯ ಗಾಯನಕ್ಕೆ ತಕ್ಕುದಾದ ಚಿತ್ರಗಳನ್ನು ಬಿಡಿಸುವರು. ನೃತ್ಯ ಪ್ರದರ್ಶನದಲ್ಲಿ ಸ್ಮಿತಾ ಹೇಮೇಶ್ ಮತ್ತು ಸುನೀತಾ ಕಿರಣ್ ಭಾಗವಹಿಸುವರು.



# ಹಳ್ಳಿಯ ಪ್ರತಿಭೆಗಳಿಗೆ ಬೆಳಕು: ಡಾ. ಸುಧಾಕರ್ ಕೃತಿಗೆ ಗಣ್ಯರ ಶ್ಲಾಘನೆ

**ದಾವಣಗೆರೆ:** ಕರ್ನಾಟಕದ ಕ್ರೀಡಾ ಸಾಧಕರ ಕುರಿತು ಪುಸ್ತಕ ರಚಿಸಿ ಪ್ರಕಟಿಸಿರುವ ಡಾ. ಸುಧಾಕರ್ ಜಿ ಲಕ್ಕವಳ್ಳಿ ಅವರು ತಮ್ಮ ಕೃತಿಯ ಪ್ರತಿಗಳನ್ನು ದಾವಣಗೆರೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಂತರಾಷ್ಟ್ರೀಯ ಕುಸ್ತಿ ತರಬೇತುದಾರರಾದ ತುಕಾರಾಂ ಗೌಡ ಹಾಗೂ ಹನುಮಂತಪ್ಪ ಪಾಟೀಲ್ ಅವರಿಗೆ ನೀಡಿ ಗೌರವಿಸಿದರು.

ಪುಸ್ತಕ ಸ್ವೀಕರಿಸಿ ಮಾತನಾಡಿದ ತರಬೇತು ದಾರರು, ಹಳ್ಳಿಗಾಡಿನಿಂದ ಬಂದ ಪ್ರತಿಭೆಗಳನ್ನು ಹಾಗೂ ವಿಕಲಚೇತನ ಸಾಧಕರನ್ನು ಗುರುತಿಸಿ ದಾಖಲಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ನಿಮ್ಮಿಂದ ಇನ್ನೂ ಸಾಕಷ್ಟು ಸಾಧಕರು ಗುರುತಿಸಲ್ಪಡಲಿ ಎಂದು



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,